15. 2017–18 ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಕ್ಕಾಗಿ ಸಂಭಾವನೆ ಎಂದು ಅಧ್ಯಾಪಕರುಗಳಿಗೆ ಪಾವತಿಸಿರುವ ಮೊತ್ತ ರೂ.1,93,450/– ಗಳ ಆಕ್ಷೇಪಣೆ . 2017–18 ನೇ ಸಾಲಿನ ಸಾಮಾನ್ಯ ನಿಧಿಯ ವೋಚರ್‌ಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ಕಾರ್ಯ, ಮೌಲ್ಯ ಮಾಪನಗಳೆಂದು ಅಧ್ಯಾಪಕರುಗಳಿಗೆ ಸಂಭಾವನೆ ಪಾವತಿಸಿರುವುದು ಕಂಡು ಬರುತ್ತದೆ. "ಕರ್ನಾಟಕ ಶಿಕ್ಷಣ ಕಾಯ್ದೆ 1983" ನಿಯಮ 28 ರ ಅನ್ವಯ ಪರೀಕ್ಷಾ ಕಾರ್ಯವು ಶೈಕ್ಷಣಿಕ ಕಾರ್ಯದ ಒಂದು ಭಾಗವಾಗಿದ್ದು ಸಂಭಾವನೆ ಪಡೆಯಲು ಅವಕಾಶ ನೀಡಿರುವುದಿಲ್ಲ ಪರೀಕ್ಷಾ ಕಾರ್ಯವು ಶೈಕ್ಷಣಿಕ ಕಾರ್ಯದ ಒಂದು ಅವಿಭಾಜ್ಯ ಅಂಗವಾಗಿದ್ದು ಈ ಅಂಶಗಳನ್ನು ಗಣನೆಯಲ್ಲಿರಿಸಿಕೊಂಡು ಅಧ್ಯಾಪಕರುಗಳಿಗೆ ಅತ್ಯುತ್ತಮವಾದ UGC ವೇತನ ನೀಡಲಾಗುತ್ತಿದೆ. ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ E.D/489/ UGV/ 2001/ Date-12.06.2002 ಹೆಚ್ಚುವರಿ ಕಾರ್ಯಕ್ಕೆ ಸಂಭಾವನೆ ನೀಡುವುದನ್ನು ನಿಷೇದಿಸಿರುತ್ತದೆ, ಆದ್ದರಿಂದ ಅಧ್ಯಾಪಕರುಗಳಿಗೆ ನೀಡಲಾಗುತ್ತಿರುವ ಸಂಭಾವನೆ ಕುರಿತಂತೆ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:60 ದಿ:25.10.2019 ಕೋರಲಾಗಿತ್ತು. ಆದರೆ ಯಾವುದೇ ಸೂಕ್ತ ವಿವರಣೆಯನ್ನು ಒದಗಿಸಿರುವುದಿಲ್ಲ. ಆದ್ದರಿಂದ ಸಂಭಾವನೆ ಪಾವತಿಸಿರುವ ಮೊತ್ತ ರೂ.1,93,450/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ವಿಶ್ವವಿದ್ಯಾಲಯದ ವಿವಿಧ ಪರೀಕ್ಷಾ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಖಾಯಂ ಅಧ್ಯಾಪಕರುಗಳಿಗೆ ರೂ. 1,93,450/– ಸಂಭಾವನೆ ನೀಡಲಾಗಿದೆ, ವಿಶ್ವವಿದ್ಯಾಲಯದ ಕುಲಸಚಿವರ ಕಛೇರಿಯಿಂದ ಹೊರಡಿಸಲಾದ ಆದೇಶದನ್ವಯ ಸಂಭಾವನೆ ಪಾವತಿ ಮಾಡಲಾಗಿದೆ. ಇದನ್ನು ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾಲಯದ ಹಿತ ದೃಷ್ಟಿಯಿಂದ ಮಾಡಲಾಗಿರುತ್ತದೆ. ವಿವಿಧ ಪರೀಕ್ಷಾ ಕಾರ್ಯಕ್ಕಾಗಿ ತಕ್ಕಂತೆ ಸಂಭಾವನೆಯನ್ನು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಅಕಾಡಮಿಕ್ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ಸಂಭಾವನೆಯನ್ನು ನಿಗಧಿ ಮಾಡಲಾಗಿದೆ. ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆಗೆ ಮೊದಲು ಅಧ್ಯಾಪಕರುಗಳಿಗೆ ಮೌಲ್ಯ ಮಾಪನ ಸಂಭಾವನೆಯನ್ನು ಪಾವತಿಸುವ ಪದ್ದತಿಯು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು, ಕೃಷಿ ವಿಶ್ವವಿದ್ಯಾಲಯ ಧಾರವಾಡ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿದ್ದಂತೆ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗದಲ್ಲೂ ಸಹ ಜಾರಿಯಲ್ಲಿದೆ. ವಿಶ್ವವಿದ್ಯಾಲಯವು "Karnataka Education Act" 1983 ಚಾಪ್ಟರ್ I,(3) (iii) ಕಾಯ್ದೆ ಪ್ರಕಾರ ಕೃಷಿ ವಿಶ್ವವಿದ್ಯಾಲಯಗಳು ಸದರಿ ನಿಯಮವನ್ನು ಆಯಾ ಆಡಳಿತ ಮಂಡಳಿಯ ಅನುಮೋದನೆಯನ್ನು ಪಡೆದು ಸಂಭಾವನೆಯನ್ನು ವಿತರಿಸುತ್ತಾ ಬರಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಚಾಪ್ಟರ್ 1 ರಲ್ಲಿ, ಈ ಕಾಯ್ದೆಯು ಕೃಷಿ ವಿಶ್ವವಿದ್ಯಾಲಯ, ಅಧಿನಿಯಮ 1963ರಡಿ ಗುರುತಿಸಲಾಗಿರುವ ಕೃಷಿ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವುದಿಲ್ಲ. ಎಂಬುದಾಗಿ ಸ್ಪಷ್ಟವಾಗಿ ನೀಡಿರುವುದರಿಂದ, **ವರದಿಯ ಕಂಡಿಕೆ 12 ರಲ್ಲಿ ಸೂಚಿಸಿರುವ ದಿನಾಂಕ 12.06.2002 ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಇವರ ಪತ್ರದ ನಿರ್ದೇಶನವು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವುದಿಲ್ಲ.** ಆದ್ದರಿಂದ ವಸೂಲಾತಿಗಾಗಿ ಸೂಚಿಸಿರುವ ಮೊತ್ತದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
16. ದ್ವಿದಳ ಧಾನ್ಯ ಆವರ್ತಕ ನಿಧಿಯ ಪಾವತಿಗಳಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಬೀಜ ಘಟಕದ ದ್ವಿದಳ ಧಾನ್ಯ ಆವರ್ತಕ ನಿಧಿಯ ಪಾವತಿಗಳಿಗೆ ಸಂಬಂಧಿಸಿದಂತೆ ನಗದುಪುಸ್ತಕ, ವೋಚರ್‌ಗಳು ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲಿಸಲಾಗಿ ಧಾನ್ಯಗಳನ್ನು ಸರಬರಾಜು ಮಾಡಿರುವ ಕೆಳಕಂಡ ವ್ಯಕ್ತಿಗಳಿಗೆ ನಿಗದಿಗಿಂತ ಅಧಿಕ ಮೊಬಲಗನ್ನು ಮಾಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆಯನ್ನು ಕೋರಿ ಲೆಕ್ಕವಿಚಾರಣೆ ಪತ್ರ ಸಂ. 48 ಅನ್ನು ನೀಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.	ವರದಿಯಲ್ಲಿ ಸೂಚಿಸಿದಂತೆ ಹೆಚ್ಚುವರಿಯಾಗಿ ಪಾವತಿಸಲಾದ ರೂ.12100/– ನ್ನು ವಿಶ್ವವಿದ್ಯಾಲಯದ ಬೀಜ ಘಟಕ ಕೇಂದ್ರದಿಂದ ಕೆಳಕಂಡಂತೆ ಸಂಬಂಧಿಸಿದವರಿಂದ ವಸೂಲಿ ಮಾಡಲಾಗಿದ್ದು, ಆವರ್ತಕ ನಿಧಿಯ ನಗದು ಪುಸ್ತಕದಲ್ಲಿ ಜಮಾ ತೆಗೆದುಕೊಳ್ಳಲಾಗಿದೆ.

ಕ್ರ. ಸಂ	ಸರಬರಾಜು ದಾರರ ಹೆಸರು	ಧಾನ್ಯ	ಸರಬರಾಜು ಮಾಡಿರುವ ಪ್ರಮಾಣ ಕ್ವಿ	ದರ	ಪಾವತಿಸಿರುವ ಮೊತ್ತ	ಪಾವತಿಸ ಬೇಕಾದ ಮೊತ್ತ	ವ್ಯತ್ಯಾಸ
1	ಚಂದ್ರಮ್ಮ	ಕಡಲೆ	6.5	4,600.00	32,000.00	29,900.00	2,100.00
2	ವಿಶಾಲ	ಕಡಲೆ	70	4,600.00	3,32,000.00	3,22,000.00	10,000.00
				ಒಟ್ಟು	**3,64,000.00**	**3,51,900.00**	**12,100.00**

ಅದರಂತೆ, ಮೇಲ್ಕಂಡ ಸರಬರಾಜುದಾರರಿಂದ ಒಟ್ಟು ರೂ.12,100/– ಗಳನ್ನು ವಸೂಲಿಸಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ.

ರಶೀದಿ ಸಂಖ್ಯೆ(GR No)/ದಿನಾಂಕ	ಮೊತ್ತ	ನಗದು ಪುಸ್ತಕದ ಪುಟ ಸಂಖ್ಯೆ/ದಿನಾಂಕ
21635/25.05.2021	2100/–	67/25.05.2021
21636/05.06.2021	10000/–	67/25.05.2021

ಪೂರ್ಣ ಮೊತ್ತ ವಸೂಲಾಗಿರುವುದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

17. **ಬೀಜ ಘಟಕದ ವಾಹನ ಸಂಖ್ಯೆ ಕೆಎ–14 ಪಿ–8575 ಮಹೀಂದ್ರ ಇಂಪಿರಿಯೋ ಲಾಗ್ ಪುಸ್ತಕದಲ್ಲಿ ಕಂಡುಬಂದಿರುವ ನ್ಯೂನತೆಗಳು:**

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಬೀಜ ಘಟಕದ ಕಚೇರಿ ಇಲ್ಲಿಗೆ ಹಂಚಿಕೆ ಮಾಡಿರುವ ವಾಹನ ಸಂಖ್ಯೆ ಕೆಎ–14 ಪಿ–8575 ಮಹೀಂದ್ರ ಇಂಪಿರಿಯೋ ವಾಹನಕ್ಕೆ ಸಂಬಂಧಿಸಿದ 2017–18ನೇ ಸಾಲಿನ ಲಾಗ್ ಪುಸ್ತಕವನ್ನು ಪರಿಶೀಲಿಸಲಾಗಿ ಸೆಪ್ಟಂಬರ್–2017ರ ಮಾಹೆಯಲ್ಲಿ ವಾಹನದ ಇಂಧನ ಬಾಕಿ 17 ಲೀ. ಎಂದು ನಮೂದಿಸಿದ್ದು, ವಾಸ್ತವವಾಗಿ ಇಂಧನ ಬಾಕಿ 20.51 ಲೀ ಆಗಬೇಕಾಗಿರುತ್ತದೆ. ವಾಹನದ ಇಂಧನ ಬಾಕಿಯಲ್ಲಿ ಆದ ಈ ವ್ಯತ್ಯಾಸವು ಮುಂದಿನ ಎಲ್ಲಾ ತಿಂಗಳುಗಳಲ್ಲಿ ಮುಂದುವರಿದಿರುತ್ತದೆ. ಹಾಗೂ ಅಕ್ಟೋಬರ್–2017ರ ಮಾಹೆಯಲ್ಲಿ ಖರೀದಿಸಿದ ಇಂಧನ 345.61 ಲೀ ಆಗಿದ್ದು, ಘೋಷ್ವಾರೆಯಲ್ಲಿ 345 ಲೀ ಎಂದು ನಮೂದಿಸಿರುತ್ತಾರೆ. 2017–18ನೇ ಸಾಲಿನ ಮಾರ್ಚ್–2018ರ ಅಂತ್ಯಕ್ಕೆ 3.91ಲೀ ಇಂಧನ ಬಾಕಿ ಇರುವುದಾಗಿ ನಮೂದಿಸಿದ್ದು, ವಾಸ್ತವವಾಗಿ 8 ಲೀ ಬಾಕಿ ಇರಬೇಕಾಗಿರುತ್ತದೆ. ಒಟ್ಟು 4 ಲೀ ಇಂಧನ ಕಡಿಮೆ ಕಂಡುಬಂದಿರುತ್ತದೆ. ಮೇಲ್ಕಂಡ ವ್ಯತ್ಯಾಸವು ಇಂದಿನವರೆಗೆ ಮುಂದುವರಿದಿರುತ್ತದೆ. ಅಲ್ಲದೆ ಲಾಗ್‌ಪುಸ್ತಕದಲ್ಲಿ ಕೆಲವೊಂದು ಮಾಹೆಗಳಲ್ಲಿ ಸೀಲು ಮತ್ತು ಸಹಿ ಇಲ್ಲದಿರುವುದು ಹಾಗೂ ವಾಹನ ಮೈಲೇಜ್ ಅನ್ನು ನಮೂದಿಸದಿರುವುದು ಕಂಡುಬಂದಿರುತ್ತದೆ. ಮೇಲ್ಕಂಡ ನ್ಯೂನತೆಗಳಿಗೆ ಸ್ಪಷ್ಟೀಕರಣವನ್ನು ಲೆಕ್ಕವಿಚಾರಣೆ ಸಂಖ್ಯೆ 50, ದಿನಾಂಕ: 14.10.2019 ರಲ್ಲಿ ಕೋರಲಾಗಿತ್ತು. ಅದರಂತೆ ಇಂಧನ ವ್ಯತಾಸದ 4 ಲೀ. ಗಳಿಗೆ ರೂ. 256/– ಗಳನ್ನು ದಿನಾಂಕ: 23.10.2019 ರಲ್ಲಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಿ ರಸೀದಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುತ್ತಾರೆ.

2017–18 ನೇ ಸಾಲಿನ ಲೆಕ್ಕ ಪರಿಶೋಧನೆ ಸಂದರ್ಭದಲ್ಲಿ ಈ ಬಗ್ಗೆ ಮಾಹಿತಿ ಒದಗಿಸಿದ್ದು, ರೂ. 256/– ನ್ನು ವಿಶ್ವವಿದ್ಯಾಲಯದ ನಿಧಿಗೆ 23.10.2019 ರಂದು ಜಮಾ ಮಾಡಿರುವುದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

18. ಬೀಜ ಘಟಕದ ಕಚೇರಿ ವೆಚ್ಚದ ನಗದು ಪುಸ್ತಕದಲ್ಲಿ ಕಂಡುಬಂದಿರುವ ನ್ಯೂನತೆಗಳ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಬೀಜ ಘಟಕದ ಕಚೇರಿ ವೆಚ್ಚದ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ. 1. ಯಾವುದೇ ಖರ್ಚುಗಳು ಇಲ್ಲದೆ ಪದೇ ಪದೇ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿ ಕೈನಗದಾಗಿ ಇಟ್ಟು ಕೊಂಡಿರುವುದು ಕಂಡುಬಂದಿರುತ್ತದೆ. ಉದಾ: ದಿನಾಂಕ 15.02.2018 ರಂದು ಕೈ ನಗದು ಆರಂಭಿಕ ಶಿಲ್ಕು ರೂ. 31,444/– ಇದ್ದು, ಅದೇ ದಿನ ರೂ. 4,000/–, ದಿನಾಂಕ 22.02.2018 ರಂದು 8,000/– ಡ್ರಾ ಮಾಡಿರುತ್ತಾರೆ. ಈ ಅವಧಿಯಲ್ಲಿ ದಿನಾಂಕ 15.02.2018ರಂದು, 1,000/–, ದಿನಾಂಕ 07.03.2018ರಂದು 37,930/– ಪಾವತಿ ಮಾಡಿರುತ್ತಾರೆ. ಇದೇ ರೀತಿ ಹಲವಾರು ಬಾರಿ ವಿವಿಧ ದಿನಾಂಕಗಳನ್ನು ಪುನರಾವರ್ತಿತಗೊಂಡಿರುತ್ತದೆ. 2. ನಗದು ಪುಸ್ತಕದಲ್ಲಿ ಮಾಹೆವಾರು ಮತ್ತು ವರ್ಷಾವಾರು ಫೋಷ್ವಾರೆ ನಮೂದಿಸಿರುವುದಿಲ್ಲ.ಆದುದರಿಂದ. ಒಮ್ಮೆ ಬ್ಯಾಂಕಿನಿಂದ ಡ್ರಾ ಮಾಡಿದ ಕೈನಗದು ಖರ್ಚು ಮಾಡಿದ ನಂತರವಷ್ಟೇ ಮುಂದಿನ ಖರ್ಚಿಗೆ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಲು ಸೂಚಿಸಿದೆ. ಮುಂದುವರೆದು ನಗದು ಪುಸ್ತಕದಲ್ಲಿ ಮಾಹೆವಾರು ಮತ್ತು ವರ್ಷಾವಾರು ಫೋಷ್ವಾರೆ ನಮೂದಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.	ವರದಿಯಲ್ಲಿ ಸೂಚಿಸಲಾಗಿರುವ ಸಲಹೆಗಳನ್ನು ಪಾಲಿಸಲು ವಿಶೇಷಾಧಿಕಾರಿಗಳು, ಬೀಜಘಟಕ ಇವರಿಗೆ ಸೂಚಿಸಲಾಗಿದೆ. ಈ ಬಗ್ಗೆ ವರದಿಯಲ್ಲಿ ತಿಳಿಸಿದ ಪ್ರಕಾರ ಕ್ರಮ ಕೈಗೊಳ್ಳಲಾಗಿದ್ದು, ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
19. RKVY ತಾಳೆ ಪಟ್ಟಿಯಲ್ಲಿ ಕಟ್ಟಡ ಮತ್ತು ಭೂಮಿ ಬಗ್ಗೆ ಸ್ಪಷ್ಟೀಕರಣವಿಲ್ಲದಿರುವುದು ರೂ. 1,90,54,016/– 2017–18ನೇ ಸಾಲಿನ RKVY ತಾಳೆಪಟ್ಟಿಯ ಆಸ್ತಿ ವಿವರಗಳಲ್ಲಿ ಭೂಮಿ ಮೊತ್ತ ರೂ.1,90,54,016/– ಮತ್ತು ಕಟ್ಟಡ ಮೊತ್ತ ರೂ.3,44,35,878/– ಗಳನ್ನು ತೋರಿಸಲಾಗಿದೆ. ಈ ಸಂಬಂಧ ಆಸ್ತಿ ವಹಿ ನಿರ್ವಹಿಸುವುದರ ಬಗ್ಗೆ ವಿಚಾರಣಾ ಪತ್ರ ಸಂ. 57/2017–18, ದಿನಾಂಕ 24.10.2019ರಲ್ಲಿ ವಿವರಣೆಯನ್ನು ಕೋರಲಾಗಿದ್ದು, ರೂ.1,90,54,016/– ಗಳಿಗೆ (Land Development) ಯಾವುದೇ ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ರೂ.1,90,54,016/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕಂಡಿಕೆ 19 ರಲ್ಲಿ ಆಕ್ಷೇಪಿಸಲಾದ ರೂ.1,90,54,016/– ಗಳ ಬಗ್ಗೆ 2017–18 ನೇ ಸಾಲಿನಲ್ಲಿ ಅಂದರೆ ಲೆಕ್ಕ ಪರಿಶೋಧನಾ ಸಾಲಿನಲ್ಲಿ ಯಾವುದೇ ವ್ಯವಹಾರವಿರುವುದಿಲ್ಲ, ಈ ಮೊತ್ತವು 2017–18 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಪುಟ ಸಂಖ್ಯೆ 94 ರಲ್ಲಿ ಆರ್.ಕೆ.ವಿ.ವೈ ಯೋಜನೆಯ ಅಡಾವೆ ಪತ್ರದಲ್ಲಿ "ಲ್ಯಾಂಡ್ ಡೆವಲಪ್ಮೆಂಟ್" ಶೀರ್ಷಿಕೆಯಡಿ 16 ಎಬಿಎಸಿ ಗಳ ಒಟ್ಟು ಮೊತ್ತದ ಆರಂಭ ಶಿಲ್ಕು ಆಗಿರುತ್ತದೆ. ಈ ವೆಚ್ಚದ ವರ್ಷಾವಾರು ವಿವರಗಳು ಕೆಳಕಂಡಂತೆ ಇರುತ್ತದೆ. 2013–14 ರಲ್ಲಿ ZAHRS ಶಿವಮೊಗ್ಗದಿಂದ 4 ಎಬಿಎಸಿ ಗಳಲ್ಲಿ ರೂ.10466313/– 2014–15 ರಲ್ಲಿ 8 ವಿವಿಧ ಕೇಂದ್ರಗಳಿಂದ 10ಎಬಿಎಸಿ ಗಳಡಿಯಲ್ಲಿ ರೂ.8393472/– 2016–17 ರಲ್ಲಿ ZAHRS ಶಿವಮೊಗ್ಗದಿಂದ 2 ಎಬಿಎಸಿ ಗಳಲ್ಲಿ ರೂ.194231/– ಕೇಂದ್ರವಾರು/ವರ್ಷಾವಾರು/ಎಬಿಎಸಿವಾರು ವೆಚ್ಚಮಾಡಲಾದ ವಿವರಗಳು ಕೆಳಕಂಡಂತಿವೆ.

ಹೊಸ ಎಬಿಎಸಿ	ಹಳೇ ಎಬಿಎಸಿ	ಕಛೇರಿ	ಮೊತ್ತ	ವಿವರಗಳು
2013–14				
640005	8405	ZAHRS Shimoga	1657512	Development of Laboratory fecilities for root group studies
640007	8407		2673719	Development of Laboratory fecilities for root group studies 'C' sequestration studies
640006	8406		1595512	Development of Laboratory fecilities for root group studies on rice disease complex caused by root knot nematode and sclerotial rot
640002	8402		4539570	Development of fecilities for e-Pest Survelillance document and uploading of information into NCIP Network
		Total 2013–14	**10466313**	
2014–15				
550022	8522	ZAHRS Shimoga	401355	Non recurring Contingencies
550024	8524		115611	Development and renovation of laboratory
640018	8419	ZAHRS Mudigere	2145873	Construction of new structures:poly house and Shade net and repair of existing structures of poly house shade nets at research stations and creation of irrigation facilities

	640019	8420	ZAHRS Hiriyur	2601266	Construction of new structures:poly house and Shade net and repair of existing structures of poly house shade nets at research stations and creation of irrigation facilities
	750019	8059	AHRS Kathalagere	874416	Strengthening of infrastructure and development works.
	700035	8470	COH Mudigere	1026605	Civil Works: Poly House (500m2) , Cunstruction of shade house store room-27 sqmt, Construction of water storage tank, Vermicompost pit,Bio digester.
	750008	8009		179169	Land development a) fencing-1.00. b) gardenequipments-0.50lakh. c) Drip irrigation/Sprinkler set to the mother block-1.00lakhs d) Garden equipments-2.00lakhs
	640020	8421	COH Hiriyur	251082	Construction of green house shade net house, creating irrigation fecilities etc. for traditional nursery activity. Alternation of Laboratories and structures
	640022	8423	COA Shimoga	253737	Construction of green house shade net house, creating irrigation fecilities etc. for traditional nursery activity. Alternation of Laboratories and structures
	700062	8790	KVK Brahma-vara	544358	Low cost Green House, Shade House, Grafting shed cum

				storage,Estoblishment of mother block 1 ha, Water tank 1 no, Instalation of drip/sprinkler set, to the mother block, poly house shade net 1.00 ha, Purchase of impliments,farm tools etc. Display board for mothe plants , and Propogation block, Fencing progency block,Land Priperation (Levelling, digging)
		Total 2014-15	**8393472**	
2016–17				
640042		ZAHRS Shimoga	14531	Establishment of model cashew orchard and propagation centre at ZAHRS, Navile Shimoga
640019			179700	Bio softening of Area Husk for value added Compost Standerdization and Popularization at ZAHRS Navile Shivamogga
		Total 2016-17	**194231**	
		Grand Total	**19054016**	

ಎಬಿಎಸಿ/ಡಿಎಸಿ ವಾರು ವಿವರಗಳನ್ನು ಆಯಾ ಕೇಂದ್ರಗಳಲ್ಲಿ ನಿರ್ವಹಿಸಲಾದ ವಹಿಯಲ್ಲಿ ದಾಖಲಿಸಲಾಗಿದೆ. ಇದನ್ನು ಸಂಬಂಧಿಸಿದ ಕೇಂದ್ರಗಳ/ಕಛೇರಿಗಳ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಪರಿಶೀಲಿಸಬಹುದಾಗಿದೆ. ಐಟಂವಾರು ವೆಚ್ಚದ ಮಾಹಿತಿಯನ್ನು, ಸಂಬಂಧಿಸಿದ ಕೇಂದ್ರಗಳಲ್ಲಿ ನಿರ್ವಹಿಸಿರುವ ವಹಿಗಳಲ್ಲಿ ದಾಖಲಿಸಿರುವ ಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

20. ದಾಸ್ತಾನು ಲೆಕ್ಕ: ಪ್ರತಿಯೊಂದು ಐಟಂಗಳಲ್ಲಿ ಖರೀದಿಸಿದ ಸ್ಟೇಷನರಿ, ವಸ್ತುಗಳು, ಲ್ಯಾಬ್ ಎಕ್ಯೂಪ್‌ಮೆಂಟ್ಸ್ ಮತ್ತು ಗ್ಲಾಸವೇರ್‌ಗಳು, ವಾಹನಗಳು (ಟ್ರಾಕ್ಟರ್ ಇತ್ಯಾದಿ) ಕೃಷಿ ಯಂತ್ರೋಪಕರಣಗಳು, ಫರ್ನಿಚರ್ಸ್ ಮತ್ತು ಫಿಕ್ಸ್‌ಚರ್ಸ್, ಕಂಪ್ಯೂಟರ್ ಉಪಕರಣಗಳು ಇತ್ಯಾದಿಗಳಿಗೆ ಬಿಲ್ಲುಗಳಲ್ಲಿ ದಾಸ್ತಾನು ಪುಸ್ತಕಕ್ಕೆ ತೆಗೆದುಕೊಂಡ ಹಾಗೂ ಹಿಂದಿನ ಖರೀದಿ ಬಗ್ಗೆ ದಾಖಲೆಗಳೊಂದಿಗೆ ಹಣಕಾಸು ನಿಯಂತ್ರಕರಿಗೆ ಸಲ್ಲಿಸಿ ಮರುಪಾವತಿಗೊಂಡಿರುತ್ತವೆ. ಪಾವತಿಗಳು ಡಿ.ಸಿ ಬಿಲ್ಲು/ಪಿ.ಡಿಸಿ ಬಿಲ್ಲು/ಎ.ಸಿ ಬಿಲ್ಲುಗಳ ಮೂಲಕವೂ ಆಗಿರುತ್ತವೆ. ಇವುಗಳು ಆಯಾ ವರ್ಗೀಕರಣಗಳನ್ನು ವರ್ಷಾವಾರು ಖರ್ಚು, Opening Balance + Purchases = Total, less Un-serviceable = Closing Balance ಯೊಂದಿಗೆ ಭೌತಿಕ ದಾಸ್ತಾನು ಹಾಗೂ ಮೌಲ್ಯ ದಾಖಲೆಯ ಕ್ರೋಢಿಕೃತ ಮಾಹಿತಿಯು ಹಣಕಾಸು ನಿಯಂತ್ರಕರ ಕಛೇರಿಯಲ್ಲಿ (ಡಿ.ಎಸ್.ಆರ್ ವಸ್ತುಗಳಿಗೆ ಮಾತ್ರ) ಲಭ್ಯವಿರುವುದಿಲ್ಲ. ಈ ಮೌಲ್ಯವು ವಿಶ್ವವಿದ್ಯಾಲಯದ ಅಡಾವೆ ಪತ್ರದಲ್ಲಿ ನಮೂದಾಗಬೇಕಾಗಿತ್ತದೆ. ಈ ಕ್ರಮ ಅನುಸರಿಸಿ ಮುಂದೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಂತೆ ತಿಳಿಸಲಾಗಿದೆ.	ವರದಿಯಲ್ಲಿನ ಸೂಚನೆಗಳಂತೆ ಮುಂದಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಲಾಗುವುದು.
21. ಸಾದಿಲ್ವಾರು ವೆಚ್ಚದ ಕೈಪಿಡಿ 1958 ರ ನಿಯಮಗಳನ್ನು ಮೀರಿ ಎ.ಸಿ ಬಿಲ್ಲುಗಳಲ್ಲಿ ಹಣ ಸೆಳೆದು ವಿಳಂಬವಾಗಿ ಎನ್ ಡಿ ಸಿ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿರುವುದು. 2017–18 ನೇ ಸಾಲಿನಲ್ಲಿ ಎಸಿ ಬಿಲ್ಲುಗಳ ಮೂಲಕ ಹಣ ಸೆಳೆದು, ಎನ್ ಡಿ ಸಿ ಬಿಲ್ಲುಗಳನ್ನು ಸಲ್ಲಿಸಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಸದರಿ ಸಾಲಿನ ಎನ್ ಡಿ ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ. 1) ಸಾದಿಲ್ವಾರು ವೆಚ್ಚದ ಕೈಪಿಡಿ 1958ರ ನಿಯಮ 36(2) ರ ಅನ್ವಯ ಎ.ಸಿ ಬಿಲ್ಲುಗಳಲ್ಲಿ ತಕ್ಷಣದ ಹಾಗೂ ತುರ್ತು ಅವಶ್ಯಕತೆಗಳಿಗಾಗಿ ಮಾತ್ರ ಹಣವನ್ನು ಸೆಳೆಯಬೇಕಿದ್ದು, ಬಹುತೇಕ ಬಿಲ್ಲುಗಳು ತಕ್ಷಣದ ಅವಶ್ಯಕತೆಗಳಾಗದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಉದಾ: Computer and Xerox machine purchases, ಇತ್ಯಾದಿ. 2) ಸರ್ಕಾರದ ಆದೇಶ ಸಂ; FD.02.TRP 2010 ದಿ: 30.4.2010ರ ಸಾಮಾನ್ಯ ವಿತ್ತಾಧಿಕಾರಿಗಳ ಅನ್ವಯ ಎರಡು ಲಕ್ಷ ಮೀರಿದ ಎ.ಸಿ ಬಿಲ್ಲುಗಳನ್ನು ಹಣ ಸೆಳೆಯುವ ಮುನ್ನ ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಸದರಿ ಸಾಲುಗಳ ಎ.ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಬಹುತೇಕ ಬಿಲ್ಲುಗಳಲ್ಲಿ ಎರಡು ಲಕ್ಷದಿಂದ ಹತ್ತು ಲಕ್ಷಗಳವರೆಗೆ ಹಣವನ್ನು ಸೆಳೆಯಲಾಗಿದ್ದು, ಆರ್ಥಿಕ ಇಲಾಖೆಯ ಅನುಮತಿ ಪಡೆಯದಿರುವುದು ಕಂಡು ಬಂದಿರುತ್ತದೆ. 3) ಎ.ಸಿ ಬಿಲ್ಲುಗಳಲ್ಲಿ ಹಣ ಸೆಳೆದು ಕಾಮಗಾರಿ ಸೇವೆಗಳು, ಕಟ್ಟಡ ನಿರ್ಮಾಣ, ಟೆಂಡರ್ ಪ್ರಕ್ರಿಯೆ ಮೂಲಕ ಸಾಮಗ್ರಿಗಳನ್ನು ಖರೀದಿಸಿರುವುದು ಲೆಕ್ಕಪರಿಶೀಲನೆಯಲ್ಲಿ	1. ವಿಶ್ವವಿದ್ಯಾಲಯದ ಪ್ರಾರಂಭದ ಅವಧಿಯಲ್ಲಿ ಈ ತರಹದ ಐಟಂಗಳಿಗೆ ಎ.ಸಿ.ಬಿಲ್ ನೀಡಲಾಗಿದ್ದು, ಪ್ರಸಕ್ತ ಅವಧಿಯಲ್ಲಿ ಇಂತಹ ಐಟಂ ಗಳಿಗೆ ಎ.ಸಿ. ಬಿಲ್ ನೀಡುವುದನ್ನು ನಿಲ್ಲಿಸಲಾಗಿದೆ.ಸೂಚನೆಗಳನ್ನು ಪಾಲಿಸಲಾಗುವುದು. 2. ವರದಿಯಲ್ಲಿ ಉಲ್ಲೇಖಿಸಲಾದ ಸರ್ಕಾರಿ ಆದೇಶ ದಿನಾಂಕ 30.04.2010ರಲ್ಲಿ ಪ್ರತ್ಯಾಯೋಜಿಸಿದಂತೆ ಇಲಾಖಾ ಮುಖ್ಯಸ್ಥರಿಗೆ ಇರುವ ಅಧಿಕಾರದಂತೆ, ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ಎ.ಸಿ. ಬಿಲ್ಲನ್ನು ಪಾವತಿಸಲಾಗಿದೆ. ವಿಶ್ವವಿದ್ಯಾಲಯದ ಎ.ಸಿ. ಬಿಲ್ಲಗಳ ಪಾವತಿಗೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯವ ಬಗ್ಗೆ ಸೂಕ್ತ ನಿರ್ದೇಶನ ಇರುವುದಿಲ್ಲ. 3. ಪ್ರಸಕ್ತ ಅವಧಿಯಲ್ಲಿ ಇಂತಹ ನ್ಯೂನ್ಯತೆಗಳನ್ನು ಮಾಡಲಾಗುತ್ತಿಲ್ಲ.

ಕಂಡುಬಂದಿರುತ್ತದೆ. ಈ ರೀತಿ ಎ.ಸಿ ಬಿಲ್ಲುಗಳಲ್ಲಿ ಹಣ ಸೆಳೆದು, ವೆಚ್ಚ ಮಾಡಿರುವುದು, ಸಾದಿಲ್ವಾರು ವೆಚ್ಚದ ಕೈಪಿಡಿಯ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. 4) ಸಾದಿಲ್ವಾರು ವೆಚ್ಚದ ಕೈಪಿಡಿ 1958ರ, ನಿಯಮ 36 ರ ಅನ್ವಯ ಎ.ಸಿ ಬಿಲ್ಲಿನಲ್ಲಿ ಹಣ ಸೆಳೆದ ಅಧಿಕಾರಿಗಳು, ಆ ತಿಂಗಳು ಮುಗಿಯುವುದರೊಳಗಾಗಿ ಎನ್.ಡಿ.ಸಿ ಬಿಲ್ಲು ತಯಾರಿಸಿ ಮುಂದಿನ ತಿಂಗಳ ಒಂದು ವಾರದೊಳಗೆ, ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಸದರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಒಂದು ವರ್ಷ, ಎರಡು ವರ್ಷ ಹಾಗೂ ಮೂರು ವರ್ಷದವರೆಗೂ ಎನ್.ಡಿ.ಸಿ ಬಿಲ್ಲುಗಳನ್ನು ಹೊಂದಾಣಿಕೆ ಮಾಡದಿರುವುದು ಕಂಡುಬರುತ್ತದೆ. ಇದು ಈ ನಿಯಮದ ಉಲ್ಲಂಘನೆಯಾಗಿರುತ್ತದೆ. 5) ಸಾದಿಲ್ವಾರು ವೆಚ್ಚದ ಕೈಪಿಡಿ 1958ರ, ನಿಯಮ 36(ಎ)ರ ಅನ್ವಯ ಎ.ಸಿ. ಬಿಲ್ಲಿನಲ್ಲಿ ಸೆಳೆದ ಮುಂಗಡದ ಮೊತ್ತ ಆ ತಿಂಗಳಲ್ಲಿ ವೆಚ್ಚವಾಗದಿದ್ದರೆ, ಬಾಕಿ ಮೊತ್ತವನ್ನು ಎರಡು ದಿನಗಳೊಗಾಗಿ ಹಿಂದಿರುಗಿಸಬೇಕಾಗಿರುತ್ತದೆ. ಆದರೆ, ಸದರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ, ವೆಚ್ಚ ಮಾಡದೇ ಉಳಿಕೆ ಮೊತ್ತವನ್ನು ತುಂಬಾ ವಿಳಂಬವಾಗಿ ಜಮೆ ಮಾಡಿರುವುದು ಕಂಡು ಬರುತ್ತದೆ. 6) AICRP FUND ನಲ್ಲಿ ಅವಕಾಶವಿಲ್ಲದಿರುವ ವೆಚ್ಚಗಳನ್ನು ಎ.ಸಿ ಬಿಲ್ಲುಗಳಲ್ಲಿ ಡ್ರಾ ಮಾಡಿ ಪಾವತಿಸಿರುವುದು ಕಂಡುಬಂದಿರುತ್ತದೆ. 7) ಎ.ಸಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಇತ್ಯರ್ಥ ಪಡಿಸುವಲ್ಲಿ 1–2 ವರುಷಗಳಿಗೂ ಅಧಿಕ ಅವಧಿ ತೆಗೆದು ಕೊಳ್ಳಲಾಗಿದೆ. ಈ ಮೊಬಲಗು ಆಯಾ ಕೇಂದ್ರಗಳಲ್ಲಿ ಮುಂಗಡ ರೂಪದಲ್ಲಿ ಇದ್ದರೆ ತಾತ್ಕಾಲಿಕ ಹಣದ ದುರಪಯೋಗ ಆದಂತಾಗುತ್ತದೆ. ಬ್ಯಾಂಕ್ ಖಾತೆಯಲ್ಲಿದ್ದರೆ ಕೇವಲ ಎಸ್.ಬಿ ಬಡ್ಡಿದರ ಗಳಿಸಿದಂತಾಗುತ್ತದೆ. ಅನಾವಶ್ಯಕವಾಗಿ ವಿಶ್ವವಿದ್ಯಾಲಯದ ನಿಧಿಯಿಂದ ಸೆಳೆಯುವುದರಿಂದ ಈ ನಿಧಿಯು ಗಳಿಸುತ್ತಿರುವರೇ ಠೇವಣಿ ಬಡ್ಡಿದರದಿಂದ ವಂಚಿತವಾದಂತೆ ಆಗಿದೆ. ಮೇಲಾಗಿ ಈ ಬಗ್ಗೆ ಹಣಕಾಸು ನಿಯಂತ್ರಕರು ನಿಗಾ ವಹಿಸದಿರುವುದು ವಿಷಾದಕರ ಸಂಗತಿಯಾಗಿದೆ.	4. ಎ.ಸಿ. ಬಿಲ್‌ಗಳಿಗೆ ಸದರಿ ಉದ್ದೇಶಕ್ಕಾಗಿ ನೀಡಲಾದ ಕಾರ್ಯಕ್ರಮ ಪೂರ್ಣಗೊಂಡ ನಂತರ ವಿಳಂಭ ಮಾಡದೇ ಎನ್.ಡಿ.ಸಿ.ಬಿಲ್‌ನ್ನು ಸಲ್ಲಿಸಲು ಹಾಗೂ ಬಳಕೆಯಾಗದೇ ಉಳಿದ ಮೊತ್ತವನ್ನು ತಕ್ಷಣ ಹಿಂದಿರುಗಿಸುವ ಸೂಚನೆಯೊಂದಿಗೆ ಎ.ಸಿ. ಬಿಲ್ಲನ್ನು ಮಂಜೂರು ಮಾಡಲಾಗುತ್ತಿದೆ ಮತ್ತು ಸಲ್ಲಿಸಲಾದ ಎನ್.ಡಿ.ಸಿ. ಬಿಲ್‌ಗಳನ್ನು ಪರಿಶೀಲಿಸಿ ಕಡಿತಗೊಳಿಸಬೇಕಾದ ಶಾಸನಬದ್ದ ತೆರಿಗೆಗಳನ್ನು ಕಡಿತಗೊಳಿಸಿ ವಿಳಂಭ ಮಾಡದೇ ಹೊಂದಾಣಿಕೆ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. 5. ಇಂತಹ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. 6. AICRP Fund ನಲ್ಲಿ ಅವಕಾಶವಿರುವ ವೆಚ್ಚಗಳನ್ನಷ್ಟೇ ಎ.ಸಿ. ಬಿಲ್ ಮುಖಾಂತರ ಪಾವತಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ 7. ಪ್ರಸಕ್ತ ಅವಧಿಯಲ್ಲಿ ತರಭೇತಿ ಕಾರ್ಯಗಾರ, ಶೈಕ್ಷಣಿಕ ಪ್ರವಾಸ, ಕೃಷಿಮೇಳ, ರಾವೆ(RAWE)ಕಾರ್ಯಕ್ರಮ, ಇತ್ಯಾದಿ ಅತೀ ಅವಶ್ಯಕತೆ ಇರುವ ಐಟಂಗಳಿಗೆ ಮಾತ್ರ ಎ.ಸಿ. ಬಿಲ್ ಮುಖಾಂತರ ಪಾವತಿಸಿ ಎನ್.ಡಿ.ಸಿ. ಬಿಲ್‌ಗಳನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ ಎ.ಸಿ. ಬಿಲ್ ಮುಖಾಂತರ ನೀಡಲಾದ ಮೊತ್ತವು, ಬಿಲ್ಲುಗಳ ಪಾವತಿಯಾಗುವವರೆಗೂ ಸಂಬಂಧಿಸಿದ ಬಟವಾಡೆ ಅಧಿಕಾರಿಗಳ ಕಛೇರಿಯ ಬ್ಯಾಂಕ್ ಖಾತೆಯಲ್ಲಿಯೇ ಇರುವುದರಿಂದ ಯಾವುದೇ ಆರ್ಥಿಕ ದುರುಪಯೋಗ/ನಷ್ಟ ಆಗಿರುವುದಿಲ್ಲ. ಕಾರ್ಯ ವಿಧಾನದಲ್ಲಿ (Procedural lapses) ವಿಳಂಭದಿಂದ ಆಗಿರುತ್ತದೆ. 2017–18ನೇ ಸಾಲಿನಲ್ಲಿ ನೀಡಲಾದ ಎಲ್ಲಾ ಎ.ಸಿ. ಬಿಲ್‌ಗಳು ಹೊಂದಾಣಿಕೆ ಆಗಿರುತ್ತದೆ. ಮೇಲಿನ ಅಂಶಗಳನ್ನು ಪರಿಗಣಿಸಿ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

ಉಗ್ರಾಣ ವಿಭಾಗ ಮತ್ತು ಆಸ್ತಿ ಅಧಿಕಾರಿಗಳ ಕಚೇರಿ

22.ಉಗ್ರಾಣ ಖರೀದಿ ಅಧಿಕಾರಿಗಳ ಕಚೇರಿ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ. 2017–18ನೇ ನಗದು ಪುಸ್ತಕದ ಸಾಲಿನ ಜಮೆ ಮತ್ತು ಖರ್ಚಿನ ವಿವರಗಳು. (A/C No.4083101000352)

ಕೇಂದ್ರ ಉಗ್ರಾಣ ಖರೀದಿ ಅಧಿಕಾರಿಗಳ ಕಛೇರಿ, ಕೃಷಿ & ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ ಇವರು ಭರಿಸುವ ತುರ್ತು ವೆಚ್ಚಗಳ ಸಲುವಾಗಿ ಕೈಮುಂಗಡ/ಎ.ಸಿ ಬಿಲ್ಲುಗಳಲ್ಲಿ ಮುಂಗಡವನ್ನು ಚೆಕ್ ಮೂಲಕ ಕಂಟ್ರೋಲರ್ ರವರಿಂದ ಪಡೆದು, ಸದರಿ ಚೆಕ್ಕುಗಳನ್ನು ಬ್ಯಾಂಕ್ ಖಾತೆ ಸಂಖ್ಯೆ A/C No.4083101000352 ರಲ್ಲಿ ಜಮೆ ಮಾಡಿ ನಂತರ ಡಿ.ಸಿ. ಬಿಲ್ಲುಗಳನ್ನು ಕಂಟ್ರೋಲರ್ ಕಚೇರಿಗೆ ಸಲ್ಲಿಸಿ ಅನುಮೋದನೆ ಪಡೆದು ನಗದು/ಚೆಕ್ ಮೂಲಕ ಪಾವತಿಸಲಾಗಿದೆ.

2017–18ನೇ ಸಾಲಿನಲ್ಲಿ ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಸಂಖ್ಯೆ. 4083101000352 ರಲ್ಲಿ ದಾಖಲಿಸಿರುವಂತೆ ಈ ಕಚೇರಿಯ ಆರ್ಥಿಕ ಸ್ಥಿತಿ ಈ ಕೆಳಗಿನಂತಿರುತ್ತದೆ 2017–18ನೇ ಸಾಲಿನ ಮಾಹೆವಾರು ಸ್ವೀಕೃತಿ ಹಾಗೂ ವೆಚ್ಚದ ತಃಖ್ತೆಯನ್ನು ಅನುಬಂಧ–4ರಲ್ಲಿ ನೀಡಲಾಗಿದೆ.

ದಿನಾಂಕ : 01–04–2017ಕ್ಕೆ ಆರಂಭಿಕ ಶಿಲ್ಕು ರೂ.	73,81,176.00
2017–18ನೇ ಸಾಲಿನ ಒಟ್ಟು ಸ್ವೀಕೃತಿ ರೂ.	2,51,14,108.00
ಒಟ್ಟು ರೂ.	**3,24,95,284.00**
2017–18ನೇ ಸಾಲಿನ ಒಟ್ಟು ವೆಚ್ಚ ರೂ.	1,98,49,772.00
ದಿನಾಂಕ : 31–03–2018ಕ್ಕೆ ಅಂತಿಮ ಶಿಲ್ಕು ರೂ.	1,26,45,512.00

ವರದಿಯಲ್ಲಿ ವಾಸ್ತವಿಕ ಅಂಕಿಅಂಶಗಳು ನಮೂದಾಗಿರುವುದರಿಂದ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮ ಇರುವುದಿಲ್ಲ.

23. ಆಸ್ತಿ ಅಧಿಕಾರಿಗಳ ಕಚೇರಿ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ. 2017–18 ನೇ ಸಾಲಿನ ನಗದು ಪುಸ್ತಕದ ಜಮೆ ಮತ್ತು ಖರ್ಚಿನ ವಿವರಗಳು. (A/C No.4083101000394)

ಕೇಂದ್ರ ಉಗ್ರಾಣ ಖರೀದಿ ಅಧಿಕಾರಿಗಳ ಕಚೇರಿ, ಕೃಷಿ & ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ ಇವರು ಭರಿಸುವ ತುರ್ತು ವೆಚ್ಚಗಳ ಸಲುವಾಗಿ ಕೈಮುಂಗಡ/ಎ.ಸಿ ಬಿಲ್ಲುಗಳಲ್ಲಿ ಮುಂಗಡವನ್ನು ಚೆಕ್ ಮೂಲಕ ಕಂಟ್ರೋಲರ್ ರವರಿಂದ ಪಡೆದು, ಸದರಿ ಚೆಕ್ಕುಗಳನ್ನು ಬ್ಯಾಂಕ್ ಖಾತೆ ಸಂಖ್ಯೆ **A/C No.4083101000394** ರಲ್ಲಿ ಜಮೆ ಮಾಡಿ ನಂತರ ಡಿ.ಸಿ. ಬಿಲ್ಲುಗಳನ್ನು ಕಂಟ್ರೋಲರ್ ಕಚೇರಿಗೆ ಸಲ್ಲಿಸಿ ಅನುಮೋದನೆ ಪಡೆದು ನಗದು/ಚೆಕ್ ಮೂಲಕ ಪಾವತಿಸಲಾಗಿದೆ. 2017–18ನೇ ಸಾಲಿನಲ್ಲಿ ಖರೀದಿ ಅಧಿಕಾರಿಗಳ ಕಚೇರಿಯ ಖಾತೆಯು ಖರೀದಿ ಅಧಿಕಾರಿಗಳ ಹೆಸರಲ್ಲಿದ್ದು, ಆಸ್ತಿ ಅಧಿಕಾರಿಗಳು ಬಿಲ್ಲುಗಳಿಗೆ ಮತ್ತು ಚೆಕ್‌ಗೆ ಸಹಿ ಮಾಡುತ್ತಿರುವುದು ಕಂಡುಬಂದಿರುತ್ತದೆ. ಇದನ್ನು ಸರಿಪಡಿಸಿಕೊಂಡು ಸೂಕ್ತ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲು ಸೂಚಿಸಿದೆ.

ವರದಿಯಲ್ಲಿ ವಾಸ್ತವಿಕ ಅಂಕಿಅಂಶಗಳು ನಮೂದಾಗಿರುವುದರಿಂದ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮ ಇರುವುದಿಲ್ಲ.

ಆಡಳಿತಾಧಿಕಾಗಳು, ಕೃ.ತೋ.ವಿ.ವಿ. ಶಿವಮೊಗ್ಗರವರ ಪತ್ರ ಸಂಖ್ಯೆ ಕೃ.ತೋ.ವಿ.ವಿ.(ಶಿ)/ಆ.ಕ./ಸಿ/ಶಾ/ವಿವ–225/2020–21/1675 ದಿನಾಂಕ:29.01.2021 ರ ಪ್ರಕಾರ ಸರಕು ಖರೀದಿ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಆದೇಶ ಹೊರಡಿಸಲಾಗಿದ್ದು, ದಿನಾಂಕ:01.02.2021 ರಂದು ಪ್ರಭಾರ ವಹಿಸಿಕೊಂಡಿರುತ್ತಾರೆ. ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

2017–18ನೇ ಸಾಲಿನಲ್ಲಿ ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಸಂಖ್ಯೆ. **4083101000394** ರಲ್ಲಿ ದಾಖಲಿಸಿರುವಂತೆ ಈ ಕಚೇರಿಯ ಆರ್ಥಿಕ ಸ್ಥಿತಿ ಈ ಕೆಳಗಿನಂತಿರುತ್ತದೆ 2017–18ನೇ ಸಾಲಿನ ಮಾಹೆವಾರು ಸ್ವೀಕೃತಿ ಹಾಗೂ ವೆಚ್ಚದ ತಃಖ್ತೆಯನ್ನು **ಅನುಬಂಧ–5**ರಲ್ಲಿ ನೀಡಲಾಗಿದೆ.

ದಿನಾಂಕ : 01–04–2017ಕ್ಕೆ ಆರಂಭಿಕ ಶಿಲ್ಕು ರೂ.	82,60,403.00
2017–18ನೇ ಸಾಲಿನ ಒಟ್ಟು ಸ್ವೀಕೃತಿ ರೂ.	64,73,948.00
ಒಟ್ಟು ರೂ.	**1,47,34,351.00**
2017–18ನೇ ಸಾಲಿನ ಒಟ್ಟು ವೆಚ್ಚ ರೂ.	89,23,027.00
ದಿನಾಂಕ : 31–03–2018ಕ್ಕೆ ಅಂತಿಮ ಶಿಲ್ಕು ರೂ.	58,11,324.00

24. 2017–18 ನೇ ಸಾಲಿನ ಕಟ್ಟಡ ಕಾಮಗಾರಿಗಳು, ರಿಪೇರಿ ಕಾಮಗಾರಿಗಳು ಹಾಗೂ ತುಂಡು ಗುತ್ತಿಗೆ ಆಧಾರದ ಮೇಲೆ ವಹಿಸಲಾದ ಕಾಮಗಾರಿಯ ವಿವರಗಳು.

24.1 2017–18 ನೇ ಸಾಲಿನ ಕಾಮಗಾರಿ ಬಿಲ್ಲುಗಳ ಪಾವತಿಯ ವಿವರಗಳು.(List Of Payments)

ಕಾಮಗಾರಿ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ List of Payments ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಿದ್ದು, ಪಾವತಿಯ ವಿವರಗಳು ಈ ರೀತಿ ಇರುತ್ತದೆ.

ಕ್ರ.ಸಂ.	ಪಾವತಿಯ ವಿವರಗಳು	2017–18	
		ಕೈಗೊಂಡ ಕಾಮಗಾರಿಗಳು	ಪಾವತಿಸಲಾದ ಮೊತ್ತ
1.	ಟೆಂಡರ್ ಕಾಮಗಾರಿಗಳು (Fresh Works)	152	12,61,79,228
2.	ತುಂಡು ಗುತ್ತಿಗೆ ಕಾಮಗಾರಿಗಳು (Piece Works)	469	4,15,28,314
3.	ಮುಂದುವರೆದ ಕಾಮಗಾರಿಗಳು (spill Over Works)	43	11,05,01,127
	ಒಟ್ಟು ವೆಚ್ಚ	**664**	**27,82,08,669**

ವರದಿಯಲ್ಲಿ ವಾಸ್ತವಿಕ ಅಂಕಿ ಅಂಶಗಳು ನಮೂದಾಗಿರುವುದರಿಂದ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮ ಇರುವುದಿಲ್ಲ.

ಆಸ್ತಿ ಅಧಿಕಾರಿಗಳ ಕಛೇರಿ ಮತ್ತು ಉಗ್ರಾಣ ಖರೀದಿ ಕಛೇರಿಯಲ್ಲಿನ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು:–

25. 2017–18ನೇ ಸಾಲಿನ ವಿಶ್ವವಿದ್ಯಾಲಯ ಕೈಗೊಂಡ ಖರೀದಿ ಮತ್ತು ಕಾಮಗಾರಿಗಳ ಬಿಲ್ಲುಗಳಲ್ಲಿ GST/VAT ಕಟಾಯಿಸದಿರುವುದು– 44,37,514/– ವಸೂಲಾತಿ

2017–18ನೇ ಸಾಲಿನ ವಿಶ್ವವಿದ್ಯಾಲಯದ ಖರೀದಿ ವಿಭಾಗದಿಂದ Jain Shree

Jain Sports and Scientific, Shivamogga ರವರಿಗೆ ಚೆಕ್ ನಂ 654747 ದಿನಾಂಕ: 18.03.2019 ರಲ್ಲಿ ರೂ. 9,64,000/–ಗಳನ್ನು ಆಸ್ತಿ ಅಧಿಕಾರಿಗಳು ಕೃತೋವಿವಿ ಶಿವಮೊಗ್ಗ ರವರು ಪಾವತಿಸಿದ್ದು, ಇದರಲ್ಲಿ ಬಿಲ್ಲಿನ ಮೊತ್ತ ರೂ.8,60,713.86 ಮತ್ತು 12% ಜಿಎಸ್‌ಟಿ. ರೂ.1,03,286.14 ಆಗಿರುತ್ತದೆ. ವಾಸ್ತವವಾಗಿ ಬಿಲ್ಲಿನ ಮೊತ್ತದ ಮೇಲೆ ಶೇ.2% ರಂತೆ ರೂ.17,214/– ನ್ನು ಜಿಎಸ್‌ಟಿ ಬಾಬ್ತು ಮುರುವಳಿ ಮಾಡಬೇಕಾಗಿದ್ದು ಇದನ್ನು

and Scientific ರವರಿಂದ Scientific Equipments ಅನ್ನು ಧನಾದೇಶ ಸಂ. 654747 ದಿನಾಂಕ: 18.03.2019 ರಲ್ಲಿ ರೂ. 9,64,000/–ಗಳಿಗೆ ಖರೀದಿಸಲಾಗಿದೆ. ಸರ್ಕಾರದ ಆದೇಶ ಸಂ: No.ACS/FD/2018, Bangalore, Dated:28-09-2018, ರ ಪ್ರಕಾರ ಶೇ 2% ರಷ್ಟು ಅಂದರೆ ರೂ.19,280/–ಗಳ ಜಿ.ಎಸ್.ಟಿಯನ್ನು ಕಟಾಯಿಸಿರುವುದಿಲ್ಲ. ಈ ಬಗ್ಗೆ ಲೆಕ್ಕಪರಿಶೋಧನೆ ವಿಚಾರಣಾ ಪತ್ರ ಸಂ.12/2017–18, ದಿ.06.11.2020 ರಲ್ಲಿ ವಿವರಣೆ ಕೋರಿದ್ದಾಗ್ಯೂ, ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಮುಂದುವರೆದು, 2017–18ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಕೈಗೊಂಡ ಕಾಮಗಾರಿಗಳಲ್ಲಿ ಶಾಸನಾತ್ಮಕವಾದ ಕಟಾವಣೆಯಾದ VAT/GST (ಮೌಲ್ಯವರ್ಧಿತ ತೆರಿಗೆ,ಸರಕು ಸೇವಾ ತೆರಿಗೆ) ಅನ್ನು ಕಟಾಯಿಸದೇ ಇರುವುದು ಕಂಡುಬಂದಿದ್ದು, ಈ ಸಂಬಂಧ ಲೆಕ್ಕವಿಚಾರಣೆ ಪತ್ರ ಸಂ.35/2017–18, ದಿ.21.11.2020 ರಲ್ಲಿ ವಿವರಣೆ ಕೋರಿದ್ದಾಗ್ಯೂ, ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಒಟ್ಟು ರೂ. 44,37,514/–ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು ಅನುಬಂಧ–6ರಲ್ಲಿ ಲಗತ್ತಿಸಿದೆ.	ಸಂಬಂಧಿಸಿದವರಿಂದ ವಸೂಲುಮಾಡಿ ತೆರಿಗೆ ಇಲಾಖೆಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಸರಕು ಮತ್ತು ಸೇವಾ ತೆರಿಗೆಗಳ ಕಾಯ್ದೆ 2017 ದಿನಾಂಕ:01.07.2017 ರಿಂದ ಜಾರಿಗೆ ಬಂದಿರುತ್ತದೆ. ಕಾಯ್ದೆಯ ಪ್ರಕರಣ 51ರನ್ವಯ ಮೂಲ ತೆರಿಗೆಯನ್ನು ಮುರುವಳಿ ಮಾಡಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಕಾಯ್ದೆಯ ಪ್ರಕರಣ 51 ರಲ್ಲಿ ***"ಒಂದು ಕರಾರಿನ ಅಡಿಯಲ್ಲಿ, ಪೂರೈಕೆಯ ಮೌಲ್ಯ ರೂ.2,50,000/– ಮೀರಿದ್ದಲ್ಲಿ ತೆರಿಗೆದಾಯಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರರಿಗೆ ಮಾಡಿದ ಅಥವಾ ಜಮೆಗೊಳಿಸಿದ ಸಂದಾಯದಿಂದ, ತೆರಿಗೆಯನ್ನು ಮುರುಗಡೆ ಮಾಡಲು ಆಜ್ಞಾಪಿಸಬಹುದು"*** ಎಂದಿರುತ್ತದೆ. ವರದಿಯೊಂದಿಗೆ ಲಗತ್ತಿಸಿದ **ಅನುಬಂದ 6 ರ(ಎ)** ನಲ್ಲಿ ಕ್ರಮ ಸಂಖ್ಯೆ 1 ರಿಂದ 337 ಐಟಂಗಳಲ್ಲಿ ಪಾವತಿಸಲಾದ ಕಾಮಗಾರಿಗಳ ಬಿಲ್ಲುಗಳೆಲ್ಲವೂ, ಪ್ರತಿಯೊಂದು ಪ್ರತ್ಯೇಕ ಕರಾರುಗಳಾಗಿದ್ದು ಪ್ರತಿಯೊಂದು ಕರಾರಿನ ಮೊತ್ತವು ರೂ.2,50,000/– ಕ್ಕಿಂತ ಕಡಿಮೆ ಮೊತ್ತ ಇರುವುದರಿಂದ, ಇವುಗಳಿಗೆ ವರದಿಯಲ್ಲಿ ಸೂಚಿಸಿದಂತೆ ರೂ.11,60,097/– ಗಳ ಜಿಎಸ್‌ಟಿ ವಸೂಲಾತಿ ಅನ್ವಯವಾಗುವುದಿಲ್ಲ. **ಅನುಬಂಧ 6 ರ(ಬಿ)** ನಲ್ಲಿ ಜಿಎಸ್‌ಟಿ ಮುರುವಳಿ ಮಾಡದ ಕಾರಣ ರೂ.32,22,271/– ಗಳನ್ನು ವಸೂಲಾತಿಗೆ ಸೂಚಿಸಲಾದ ಬಿಲ್ಲುಗಳು ಜನವರಿ2018 ರಿಂದ ಮಾರ್ಚ್ 2018 ರ ವರೆಗೆ ಪಾವತಿಸಲಾದ 92 ಐಟಂ ಗಳ ಪ್ರಕರಣಗಳಾಗಿರುತ್ತವೆ. ಹಾಗೂ **ಅನುಬಂಧ 6 ರ**(ಸಿ) ನಲ್ಲಿ ರೂ.35,866/– ನ್ನು ವಸೂಲಾತಿಗೆ ಸೂಚಿಸಿದ್ದು ಇವುಗಳು 4 ಐಟಂಗಳಿಗೆ ಸಂಬಂಧಿಸಿದ್ದು ಏಪ್ರಿಲ್ 2018 ಹಾಗೂ ಆಗಸ್ಟ್ 2018 ರಲ್ಲಿ ಪಾವತಿಸಲಾದ ಪ್ರಕರಣಗಳಾಗಿರುತ್ತವೆ. ಕರ್ನಾಟಕ ರಾಜ್ಯ ಪತ್ರ ಸಂಖ್ಯೆ 1373 ಭಾಗ III ರಲ್ಲಿ ಪ್ರಕಟಗೊಂಡ ಸುತ್ತೋಲೆ ಸಂಖ್ಯೆಂCS/FD/2018/ ಬೆಂಗಳೂರು ದಿನಾಂಕ:28.09.2018 ರಲ್ಲಿ ಮೂಲದಲ್ಲಿ ಕಡಿತಗೊಳಿಸಬೇಕಾದ ಸರಕು ಮತ್ತು ಸೇವಾ ತೆರಿಗೆ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಇದರನ್ವಯ ಸರಕು ಮತ್ತು ಸೇವೆ ತೆರಿಗೆ ಕಾಯ್ದೆಯ ಪ್ರಕರಣ 51, **ದಿನಾಂಕ:01.10.2018 ರಿಂದ ಕಾರ್ಯರೂಪಕ್ಕೆ ಬರುವುದಾಗಿ ಪ್ರಕಟಿಸಲಾಗಿದೆ**. ವಸೂಲಾತಿಗೆ ಸೂಚಿಸಲಾದ ಮೊತ್ತದ ಬಿಲ್ಲುಗಳನ್ನು, ಜನವರಿ 2018 ರಿಂದ ಮಾರ್ಚ್ 2018 ರವರೆಗೆ ಪಾವತಿಸಲಾಗಿರುತ್ತದೆ. ಹಾಗಾಗಿ ಅನುಬಂಧ 6ರ (ಎ,ಬಿ,ಸಿ) ರಂತೆ ವಸೂಲಾತಿಗೆ ಸೂಚಿಸಲಾದ ರೂ.11,60,097/–+32,22,271/–+35,866/–=44,18,234/– ಗಳಿಗೆ ಜಿಎಸ್‌ಟಿ ವಸೂಲಾತಿ ಅನ್ವಯವಾಗುವುದಿಲ್ಲ. ಆದ್ದರಿಂದ ವಸೂಲಾತಿಗೆ ಸೂಚಿಸಲಾದ ರೂ.44,37,514/– ರಲ್ಲಿ ರೂ. 44,20,300/– ನ್ನು ಕೈ ಬಿಡಲು ಕೋರಲಾಗಿದೆ.

26. 2017–18 ನೇ ಸಾಲಿನವರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 & ನಿಯಮ 2000 ರನ್ನು ಉಲ್ಲಂಘಿಸಿ, ಟೆಂಡರ್ ಆಹ್ವಾನಿಸದೇ ಖರೀದಿಗಳನ್ನು ವಿಭಜಿಸಿ ದರಪಟ್ಟಿ ಮೂಲಕ ಖರೀದಿಸಿರುವ ಮೊತ್ತ ರೂ.30,54,526/– ಗಳ ಆಕ್ಷೇಪಣೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 & ನಿಯಮ 2000 ದಂತೆ ಅಲ್ಪಾವಧಿ ಟೆಂಡರ್ ಕರೆಯದೇ ದರಪಟ್ಟಿ ಕರೆದು ಬಿಲ್ಲುಗಳನ್ನು ಉದ್ದೇಶ ಪೂರ್ವಕವಾಗಿ ವಿಭಜಿಸಿ ಪಾವತಿಸಿರುವುದು ಕಂಡುಬಂದಿದೆ

1) ಕೆ.ಟಿ.ಪಿ.ಪಿ. ನಿಯಮ 2000 ರ ನಿಯಮ 4(5) & 5 ರ ಅನ್ವಯ ಒಂದು ಲಕ್ಷ ಮೀರಿದ ಖರೀದಿಗಳನ್ನು ಟೆಂಡರ್ ಮೂಲಕ ಕೈಗೊಳ್ಳಬೇಕಾಗಿರುತ್ತದೆ, ಈ ಮೇಲ್ಕಂಡ ಖರೀದಿಗಳನ್ನು ಗಮನಿಸಿದಾಗ ಟೆಂಡರ್ ಪ್ರಕ್ರಿಯೆ ತಪ್ಪಿಸಲು ತುಂಡು ಖರೀದಿ ಮಾಡಲಾಗಿದೆ.
2) ಮುಂದುವರಿದು ಈ ಖರೀದಿಗಳಿಗೆ ಪಡೆದ ಬಹುತೇಕ ಬಿಲ್ಲುಗಳ ಕಂಪ್ಯೂಟರೈಸ್ಡ್ ಆಗಿರುವುದಿಲ್ಲ, ಕೈಬರಹದ ಮೂಲಕ ಬಿಲ್‌ಗಳನ್ನು ಪಡೆಯಲಾಗಿದೆ. ಆದ್ದರಿಂದ ಇದು ಅಂಗೀಕೃತ ಸಂಸ್ಥೆಯಾಗಿರುವುದೇ? ವಿವರಣೆ ನೀಡಿರುವುದಿಲ್ಲ.
3) ಬಹುತೇಕ ಖರೀದಿಗಳು ಕೇವಲ ಕೆಲವೇ ದಿನಗಳ ಅಂತರದಲ್ಲಿ ದರ ವಿಭಜಿಸಿ ಒಂದೇ ಸಂಸ್ಥೆಯಿಂದ ತುಂಡು ಖರೀದಿ ಮಾಡಲಾಗಿದೆ.
4) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ/2/ಇ–ಸಂಗ್ರಹ/2009 ದಿನಾಂಕ:09.10.2012 ಅನುಬಂಧದ ಕ್ರಮ ಸಂಖ್ಯೆ:58ರಲ್ಲಿ ಸೂಚಿಸಿರುವಂತೆ ಕೆ.ಟಿಪಿ.ಪಿ ನಿಯಮಗಳ ಅನುಸಾರವೇ ಖರೀದಿಸಬೇಕೆಂದು ಸ್ಪಷ್ಟ ನಿರ್ದೇಶನವಿದ್ದರೂ ಸಹ ಅದರ ಮೂಲ ಉದ್ದೇಶದ ಉಲ್ಲಂಘನೆಯಾಗಿದೆ.
5) "Rate Contract" ಮೂಲಕ ಖರೀದಿಗಳನ್ನು ಕೈಗೊಂಡ ವಿವರಣೆ ಒದಗಿಸಿರುವುದಿಲ್ಲ.

ಈ ಸಂಬಂಧ ವಿವರಣೆ ಒದಗಿಸುವಂತೆ ಲೆಕ್ಕ ವಿಚಾರಣೆ ಪತ್ರ ಸಂ. 18(ಎ), 28, 32ರಲ್ಲಿ ದಿನಾಂಕ:11.11.2020, 13.11.2020ರಲ್ಲಿ ಕೋರಲಾಗಿತ್ತು. ನೀಡಿರುವ ಉತ್ತರವು ಸಮಂಜಸವಾಗಿಲ್ಲದ ಕಾರಣ ಪಾವತಿಸಿರುವ ಮೊತ್ತ ರೂ.30,54,526/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ–7**ರಲ್ಲಿ ಒದಗಿಸಲಾಗಿದೆ.

Serial Number	Particulars	Amount
1	Furnitures and other Equipments for newly established centres Hiriyur and Bhavikere	21,04,102/-
2	Name board and cctv for main campus and hostel	7,02,624/-

1) ವಿಶ್ವವಿದ್ಯಾಲಯದ ಎಲ್ಲಾ ಕೇಂದ್ರಗಳಿಂದ ಸಂಬಂಧಪಟ್ಟ ಖರೀದಿಗಳಿಗೆ ಅವರ ಮುಖ್ಯಸ್ಥರುಗಳಿಂದ ಅವರ ಅವಶ್ಯಕತೆ ಇರುವ ಉಪಕರಣಗಳ ಅನುಗುಣವಾಗಿ ವಿವಿಧ ದಿನಾಂಕಗಳಂದು ಬೇರೆ ಬೇರೆ ಲೆಕ್ಕ ಶೀರ್ಷಿಕೆಗಳಲ್ಲಿ (AB/AC ಮತ್ತು DAC) ಹಣಕಾಸು ಮಂಜೂರಾತಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಹಾಗೂ ಎಲ್ಲಾ ಹಣಕಾಸು ಮಂಜೂರು ಪ್ರತಿಗಳು ರೂ 1 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದುದರಿಂದ ಕೆ.ಟಿ.ಪಿ.ಪಿ ನಿಯಾಮಾನುಸಾರದಂತೆ ಸ್ಪರ್ಧಾತ್ಮಕ ದರ ಪಟ್ಟಿಗಳನ್ನು ಆಹ್ವಾನಿಸಿ ಕಡಿಮೆ ದರ ನಮೂದಿಸಿದ ವಿವಿಧ ಫರ್ಮ್‌ಗಳಿಂದ ಖರೀದಿಸಲಾಗಿರುತ್ತದೆ. ಪ್ರತಿ ಖರೀದಿಯು ವಿವಿಧ ದಿನಾಂಕಗಳಲ್ಲಿ, ವಿವಿಧ ವಿಭಾಗದ ಕೇಂದ್ರಗಳಿಗೆ ಸಂಬಂಧಿಸಿದ್ದು ಹಾಗೂ ಪ್ರತ್ಯೇಕ ಐಟಂಗಳಾಗಿದ್ದು ಸ್ಪರ್ಧಾತ್ಮಕ ದರ ನಮೂದಿಸಿದ ವಿವಿಧ ಫರ್ಮ್‌ಗಳಿಂದ ಖರೀದಿಸಿದ್ದು, ಖರೀದಿಯ ಮೊತ್ತ 1 ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲ.

ವಿಶ್ವವಿದ್ಯಾಲಯದಲ್ಲಿನ ಕೃಷಿ ಸಂಶೋಧನಾ ಕೇಂದ್ರ ಬಾವಿಕೆರೆಯಲ್ಲಿ ನೂತನ ಸ್ನಾತಕೋತ್ತರ ಕೇಂದ್ರ ಪ್ರಾರಂಭಗೊಂಡಿದ್ದರಿಂದ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ/ ಹೊರದೇಶ ವಿದ್ಯಾರ್ಥಿಗಳ ವಸತಿ ನಿಲಯಗಳಿಗೆ ತುರ್ತಾಗಿ ಪೀಠೋಪಕರಣಗಳ ಅವಶ್ಯಕತೆ ಇದ್ದುದರಿಂದ ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಹಿರಿಯೂರಿನಲ್ಲಿರುವ ಹಾಗೂ ವಿವಿಧ ವಿಭಾಗದ ಕೇಂದ್ರಗಳಿಗೆ ಅವಶ್ಯಕತೆ ಇರುವ ವಿವಿಧ ಉಪಕರಣಗಳನ್ನು ಅವಶ್ಯಕವಾಗಿ ಒದಗಿಸಬೇಕಾಗಿರುವುದರಿಂದ ಬೇರೆಬೇರೆ ದಿನಾಂಕಗಳಲ್ಲಿ ಹಣಕಾಸು ಅನುಮೋದನೆ ಮೊತ್ತದ ಮಿತಿಯಲ್ಲಿಯೇ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ.

2) ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ ಮಾಡಲಾದ ಖರೀದಿಗಳಲ್ಲಿ ಕೆಲವು ಸಂಸ್ಥೆಗಳು ಕೈಬರಹದ ಬಿಲ್ಲುಗಳನ್ನು ನೀಡಿದ್ದು, ಇವುಗಳು ಅಂಗೀಕೃತ ಮತ್ತು ಸ್ಥಳೀಯ ಪ್ರಸಿದ್ಧ ಸಂಸ್ಥೆಗಳಾಗಿರುತ್ತವೆ.

3) ಕೆಲವು ಉಪಕರಣಗಳು ವಿಶ್ವವಿದ್ಯಾಲಯದ ವಿವಿಧ ಸಂಶೋಧನಾ ಕಾರ್ಯಗಳಿಗೆ, ಪ್ರಾಜೆಕ್ಟ್‌ನ ಕೆಲಸ ಕಾರ್ಯಗಳಿಗೆ, ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಅವಧಿಯೊಳಗೆ ಕಛೇರಿ, ಹಾಸ್ಟೆಲ್ ಮತ್ತು ಅತಿಥಿ ಗೃಹಗಳ ತುರ್ತು ನಿರ್ವಹಣೆಗಳಿಗೆ ಇತ್ಯಾದಿ ಕಾರ್ಯಗಳಿಗೆ ತುರ್ತಾಗಿ ಉಪಕರಣಗಳು ಅವಶ್ಯಕತೆ ಇದ್ದುದರಿಂದ ದರಪಟ್ಟಿ ಆಹ್ವಾನಿಸಿ ಕಡಿಮೆ ನಮೂದಿಸಿದ ಸಂಸ್ಥೆ/ಕಂಪನಿಗಳಿಂದ ವಿವಿಧ ದಿನಾಂಕಗಳಲ್ಲಿ ಖರೀದಿ ಮಾಡಲಾಗಿದೆ.

4) ವಿಶ್ವವಿದ್ಯಾಲಯದ ಖರೀದಿ ಪ್ರಕ್ರಿಯೆಯು, ಪ್ರಸ್ತುತ ಕೆ.ಟಿ.ಪಿ.ಪಿ. ನಿಯಮಾನುಸಾರ ರೂ. 1.00 ಲಕ್ಷ ಮೊತ್ತದ ಒಳಗಿನ ಖರೀದಿ ಹಾಗೂ ಸೇವೆಗಳನ್ನು ಸ್ಪರ್ಧಾತ್ಮಕ ಕೊಟೇಷನ್‌ಗಳ ದರ ಪಟ್ಟಿಗಳನ್ನು ಆಹ್ವಾನಿಸಿ ಕಡಿಮೆ ದರ ನಮೂದಿಸಿದ ವಿವಿಧ ಫರ್ಮ್‌ಗಳಿಂದ ಖರೀದಿಸಲಾಗಿರುತ್ತದೆ ಹಾಗೂ ರೂ. 1.00 ಲಕ್ಷ ಮೀರಿದ ಖರೀದಿ ಹಾಗೂ ಸೇವೆಗಳನ್ನು ಇ–ಪ್ರಕ್ಯೂರ್‌ಮೆಂಟ್

3	Furnitures for colleges	2,47,500/-
	ಒಟ್ಟು	**30,54,526/-**

ಮುಖಾಂತರ ಖರೀದಿ ಮಾಡುತ್ತಿರುವುದರಿಂದ, ಮೂಲ ಉದ್ದೇಶದ ಉಲ್ಲಂಘನೆಯಾಗಿರುವುದಿಲ್ಲ. ಆದುದರಿಂದ ಈ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ

5. ವಿಶ್ವವಿದ್ಯಾಲಯದಲ್ಲಿ Rate Contract ಮೂಲಕ ಯಾವುದೇ ಖರೀದಿಗಳನ್ನು ಮಾಡಿರುವುದಿಲ್ಲ.

27. Jungle clearance in Survey No.13, 68, 69 and 70 at UAHS New Campus Iruvakki ಕಾಮಗಾರಿಯಲ್ಲಿನ ನ್ಯೂನತೆಗಳು(10,00,000/– ಅಂದಾಜು ಮೊತ್ತ) 10,00,000/– ಆಕ್ಷೇಪಣೆ

2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಇರುವಕ್ಕಿ ಆವರಣದ ಸ. ನಂ. 13, 68, 69 ಮತ್ತು 70 ರಲ್ಲಿ Jungle clearance ಮಾಡಿಸಲಾಗಿದೆ. ಈ ಕಾಮಗಾರಿಗೆ 10,00,000/–ಲಕ್ಷ ರೂ, ಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಸದರಿ ಅನುಮೋದನೆಯಲ್ಲಿ ಸಾಮಗ್ರಿ ಸಂಖ್ಯೆ 01 ಕ್ಕೆ, 35 ಪರಿಮಾಣಗಳಿಗೆ ದರ ರೂ. 22,850/– ರಂತೆ ಒಟ್ಟು 9,74,820/–ಗಳಿಗೆ ಅಂದಾಜು ಮಾಡಲಾಗಿದೆ. ಆದರೆ ಪರಿಷ್ಕೃತ ಅಂದಾಜಿನಲ್ಲಿ Non tender item ನ್ನು ಸೇರಿಸಲಾಗಿದ್ದು 62.713 ಪರಿಮಾಣಕ್ಕೆ ರೂ. 15.56/– ರಂತೆ ಒಟ್ಟು 9,75,816/– ಗಳಿಗೆ ಅಂದಾಜು ಮಾಡಿ ಪಾವತಿ ಮಾಡಲಾಗಿದೆ. ಮೂಲ ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಸಾಮಗ್ರಿಯನ್ನು ಸಂಪೂರ್ಣವಾಗಿ ಕಡಿಮೆ ಮಾಡಿ ಪರಿಷ್ಕೃತ ಅಂದಾಜಿನಲ್ಲಿ Non tender item ನ್ನು ಸೇರಿಸಿರುವುದರಿಂದ ಮೂಲ ಅಂದಾಜು ಪಟ್ಟಿಯೇ ತಪ್ಪಾಗಿರುವುದು ಸ್ಪಷ್ಟವಾಗಿದೆ. ಈ ಸಂಬಂಧ ಆಡಿಟ್ ವಿಚಾರಣೆ ಪತ್ರ ಸಂಖ್ಯೆ. 36 ದಿನಾಂಕ: 21.11.2020 ರಲ್ಲಿ ವಿವರಣೆ ಕೋರಿದ್ದರೂ ಸೂಕ್ತ ಉತ್ತರ ನೀಡಿರುವುದಿಲ್ಲ. ಆದ್ದುದರಿಂದ 10,00,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಪಾವತಿ ವಿವರ ಈ ಕೆಳಕಂಡಂತಿದೆ.
ಚೆಕ್ ನಂ. 963118 ದಿನಾಂಕ:–31.01.2018.

ಅ) ಸದರಿ ಕಾಮಗಾರಿಯಲ್ಲಿ ಐಟಂ ನಂ. 01 ರಲ್ಲಿ 35.00 ಹೆಕ್ಟೇರ್ ಪ್ರದೇಶದಲ್ಲಿ ಜಂಗಲ್ ತೆಗೆಯಲು ಅನುವುಮಾಡಿಕೊಳ್ಳಲಾಗಿರುತ್ತದೆ.
ಆ) ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ, ಹಿರಿಯ ಕ್ಷೇತ್ರಾಧಿಕಾರಿಗಳು, ಮುಖ್ಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಇರುವಕ್ಕಿ ಇವರು ಸ್ಥಳಕ್ಕೆ ಭೇಟಿ ನೀಡಿ ಜಂಗಲ್ ಜೊತೆಗೆ ನೆಲದ ಸ್ಕ್ಯಾರಿಫೈ ಮಾಡಿ ಕೊಡಲು ಪತ್ರ ಸಂಖ್ಯೆ 06/2017–18, ದಿನಾಂಕ:20.11.2017ರಲ್ಲಿ ಕೋರಿರುತ್ತಾರೆ
ಇ) ಹಿರಿಯ ಕ್ಷೇತ್ರಾಧಿಕಾರಿಗಳ ಕೋರಿಕೆ ಮೇರೆಗೆ ಜಂಗಲ್ ತೆಗೆದು ನಂತರ ಸ್ಕ್ಯಾರಿಫೈ ಮಾಡುವ ಹೆಚ್ಚುವರಿ ಐಟಂ ನ್ನು ನೀಡುವ ಬದಲು, ಅತ್ಯಂತ ದಟ್ಟವಾಗಿ ಬೆಳೆದಿರುವ ಜಂಗಲ್ ಪ್ರದೇಶದಲ್ಲಿ ಮಾತ್ರ ಜಂಗಲ್ ಕ್ಲಿಯರೆನ್ಸ್ ಐಟಂ ಅನ್ನು ಬಿಲ್ಲಿನಲ್ಲಿ ತೋರಿಸಲಾಗಿದೆ. ಹಾಗೂ ಉಳಿಕೆ ಪ್ರದೇಶದಲ್ಲಿ ಅಂದರೆ ಅಷ್ಟೊಂದು ದಟ್ಟವಾಗಿಲ್ಲದ ಜಂಗಲ್ ಪ್ರದೇಶದಲ್ಲಿ ಸ್ಕ್ಯಾರಿಫೈಯಿಂಗ್ ಐಟಂ ಮಾತ್ರ ನೀಡಲಾಗಿದೆ. ಸ್ಕ್ಯಾರಿಫೈಯಿಂಗ್ ಐಟಂ ಜೊತೆಗೆ ಗುತ್ತಿಗೆದಾರರು ಜಂಗಲ್‌ನ್ನು ತೆಗೆದಿರುತ್ತಾರೆ.
ಈ) ಇದರಿಂದಾಗಿ ಪರಿಷ್ಕೃತ ಅಂದಾಜಿನಲ್ಲಿ ಅವಶ್ಯಕತೆ ಇರುವಷ್ಟು ಅಂದರೆ 0.584 ಹೆ. ನಷ್ಟು ಪ್ರಮಾಣದಷ್ಟು ಜಂಗಲ್ ತೆಗೆಯುವ ಅಂಶವನ್ನು ಅಳವಡಿಸಿಕೊಂಡು, Non tendered item ನಲ್ಲಿ ಉಳಿಕೆ 62713.00 ಚ.ಮೀ. ನಷ್ಟು ಪರಿಮಾಣದ ಸ್ಕ್ಯಾರಿಫೈಯಿಂಗ್ ಐಟಂ ಅನ್ನು ಅಳವಡಿಸಿಕೊಂಡು ಕಾಮಗಾರಿ ನಿರ್ವಹಿಸಲಾಗಿರುತ್ತದೆ.
ಉ) ಇದರಿಂದಾಗಿ ಅನುಮೋದಿತ ಅಂದಾಜು ಮೊತ್ತದ ಮಿತಿಯೊಳಗೇ ಉಪಯೋಗಿ ಇಲಾಖೆಯವರು ಕೋರಿರುವ ಸಂಪೂರ್ಣ ಪ್ರದೇಶದಲ್ಲಿ ಜಂಗಲ್ ಕ್ಲಿಯರೆನ್ಸ್ ಜೊತೆಗೆ ಸ್ಕ್ಯಾರಿಫೈಯಿಂಗ್ ಅಂಶವನ್ನೂ ಸಹ ನಿರ್ವಹಿಸಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹೆಚ್ಚು ಅನುಕೂಲವಾಗುವ ನಿಟ್ಟಿನಲ್ಲಿ ಕಾಮಗಾರಿ ನಿರ್ವಹಿಸಲಾಗಿರುತ್ತದೆ. ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ಉಳಿತಾಯವೇ ಆಗಿರುತ್ತದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.

28. 2017–18ನೇ ಸಾಲಿನ ಕಾಮಗಾರಿಗಳನ್ನು ಸಿಂಗಲ್ ಟೆಂಡರ್ ಮೂಲಕ ನಿರ್ವಹಿಸಿರುವ ಕುರಿತು ರೂ. 1,47,77,466/– ಆಕ್ಷೇಪಣೆ

2017–18ನೇ ಸಾಲಿನ ಕಾಮಗಾರಿಗಳನ್ನು ಪರೀಶಿಲಿಸಿದಾಗ ಕೆಲವೊಂದು ಕಾಮಗಾರಿಗಳನ್ನು ಸಿಂಗಲ್ ಟೆಂಡರ್ ಮುಖಾಂತರ ನಿರ್ವಹಿಸಲಾಗಿರುತ್ತದೆ. ಆದರೆ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000 ದ ಪ್ರಕಾರ ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯುವಾಗ ಕನಿಷ್ಠ ಪಕ್ಷ ಇಬ್ಬರು

ಸದರಿ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸುವ ಅವಶ್ಯಕತೆ ಇದ್ದುದರಿಂದ ಮಾನ್ಯ ಕುಲಪತಿಯವರಿಂದ ಅನುಮೋದನೆ ಪಡೆದು ಸಿಂಗಲ್ ಬಿಡ್ ಟೆಂಡರ್‌ಗೆ ಅನುಮೋದನೆ ನೀಡಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: DE 576 ವೆಚ್ಚ–12 2018 ದಿನಾಂಕ: 22–05–2018 ರ ಆದೇಶದ ಪ್ರಕಾರ ಸಿಂಗಲ್ ಬಿಡ್ ಟೆಂಡರ್ ಪರಿಗಣಿಸಲೇಬೇಕಾದಂತಹ ಅಸಾಧಾರಣ

ಟೆಂಡರ್‌ದಾರರಿರಬೇಕಾಗಿರುತ್ತದೆ. ಇದರಿಂದ ಸ್ಪರ್ಧಾತ್ಮಕ ದರಕ್ಕೆ ಕಾಮಗಾರಿಯನ್ನು ನೀಡಲು ಅವಕಾಶವಿರುತ್ತದೆ. ಆದರೆ ವಿಶ್ವವಿದ್ಯಾಲಯದ ಕಾಮಗಾರಿಗಳನ್ನು ಪರಿಶೀಲಿಸಿದಾಗ ಆರ್ಥಿಕ ಬಿಡ್‌ನಲ್ಲಿ ಕೇವಲ ಒಬ್ಬ ಟೆಂಡರ್‌ದಾರ ಭಾಗವಹಿಸಿದ್ದರೂ ಮರು ಟೆಂಡರ್ ಮಾಡದೇ ಕಾಮಗಾರಿಗಳನ್ನು ನೀಡಲಾಗಿರುತ್ತದೆ. ಈ ಸಂಬಂಧ ಆಡಿಟ್ ವಿಚಾರಣೆ ಪತ್ರ ಸಂಖ್ಯೆ;–39, ದಿನಾಂಕ: 21.11.2020ರಲ್ಲಿ ವಿವರ ಕೋರಿದ್ದರೂ ಸಹ ಯಾವುದೇ ಸಮಂಜಸ ಉತ್ತರವನ್ನು ನೀಡಿರುವುದಿಲ್ಲ. ಆದುದರಿಂದ, ರೂ. 1,47,77,466/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ–8** ರಲ್ಲಿ ಲಗತ್ತಿಸಿದೆ.

ಸಂದರ್ಭಗಳಲ್ಲಿ ಮಾತ್ರ, ಬಿಡ್ ಮಾಡಲಾದ ಟೆಂಡರ್ ದರಗಳು ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.5 ಕ್ಕಿಂತ ಕಡಿಮೆಯಾಗಿದ್ದಲ್ಲಿ ಅಥವಾ ಬಿಡ್ ಮಾಡಲಾದ ದರದಿಂದ ಉಳಿತಾಯವಾಗುವ ಸಂದರ್ಭವಿದ್ದಲ್ಲಿ ಇ–ಸಂಗ್ರಹಣೆ ತಂತ್ರಾಂಶದಲ್ಲಿಯೇ ದರ ಸಂಧಾನ ಮಾಡುವುದನ್ನು ಪರಿಗಣಿಸಬಹುದಾಗಿದೆ.

ಸದರಿ ಕಾಮಗಾರಿಗಳ ಟೆಂಡರ್ ದರಗಳು ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.5 ಕ್ಕಿಂತ (Tender Premium) ಕಡಿಮೆ ಇರುತ್ತದೆ.

ವಿವರಗಳು ಈ ಕೆಳಗಿನಂತಿವೆ.

Sl.No.	Name of work	Estimate Amount	Tender Premium
1	Construction of first floor over the atomic absorption spectrophotometer (AS) laboratory at KVK Building at COH, Hiriyur	**3578000/-**	**(-)7.65%**
2	Construction of lift chamber for passenger elevator for college block II Navile, Shimoga	**328420/-**	**(-)13.00%**
3	Construction of WBM road at AHRS, Madikeri	**993900/-**	**(-)20.05%**
4	Construction of vehicle shed at AHRS, Kathalagere	**573770/-**	**(-)21.07%**
5	Construction of water storage sump to Madhubana girls hostel at COH, Mudigere	**382015/-**	**(-)15.34%**
6	AR & SR works to madhubana girls hostel at COH, Mudigere	**877311/-**	**(-)5.68%**
7	Water proofing work to library building at COH, Mudigere	**940817/-**	**(-)19.52%**
8	Renovation of first floor office building at ZAHRS, Mudigere	**875460/-**	**(-)15.00%**
9	Approach to canteen building at COH, Mudigere	**859090/-**	**(-)9.26%**
10	Extension of compound wall near Agricultural Engineering workshop at ZAHRS, Brahmavara	**920140/-**	**(-)15.09%**
11	Renovation of KVK farmers hostel at KVK, Brahmavara	**940175/-**	**(-)12.34%**
12	Repair works to farm machinery shed near farm office at ZAHRS, Brahmavara	**950000/-**	**(-)16.20%**
13	Construction of concrete road near paddy field at AHRS, Madikeri	**954085/-**	**(-)4.35%**
14	Construction of first floor office building at AHRS, Kademadkal	**959980/-**	**(-)10.35%**
15	Construction of poly houses for rice breeding research work at ZAHRS, Brahmavara	**398303/-**	**(-)5.00%**
16	Providing Chain link fencing behind the Agronomy lab.	**246000**	**(-)7.02%**
	Total	**14777466**	

ಈ ಮೇಲಿನ ಎಲ್ಲಾ ಕಾಮಗಾರಿಗಳ ಟೆಂಡರ್ ದರಗಳು ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಗುತ್ತಿಗೆದಾರರು ಕೋಟ್ ಮಾಡಲಾದ ಟೆಂಡರ್ ಪ್ರೀಮಿಯಮ್ ಶೇ.4.35 ರಿಂದ 21.07 ರವರೆಗೆ ಕಡಿಮೆ ಇರುವುದರಿಂದ ವಿಶ್ವವಿದ್ಯಾಲಯಕ್ಕೆ ಉಳಿತಾಯವಾಗುತ್ತದೆ ಎಂಬ

	ಕಾರಣದಿಂದ ಹಾಗೂ ತುರ್ತಾಗಿ ಕೆಲಸ ನಿರ್ವಹಿಸಬೇಕಾದ ಅಗತ್ಯತೆ ಇದ್ದುದರಿಂದ ಸಿಂಗಲ್ ಟೆಂಡರ್‌ಅನ್ನು ಅಂಗೀಕರಿಸಲಾಗಿದೆ. ವಿಶ್ವವಿದ್ಯಾಲಯಕ್ಕೆ ಆಗಿರುವ ಸಮಯದ ಹಾಗೂ ಆರ್ಥಿಕ ಉಳಿತಾಯವನ್ನು ಪರಿಗಣಿಸಿ ಸದರಿ ಆಕ್ಷೇಪಣೆಗಳನ್ನು ಕೈಬಿಡಲು ಕೋರಿದೆ.
29. Construction of Sewage Treatment Plant for Diploma College & Boys Hostel at Bramhavara ಕಾಮಗಾರಿಗಳ ನ್ಯೂನತೆಗಳು.(ಅಂದಾಜು ಮೊತ್ತ ರೂ. 50,00,000/–)ರೂ. 22,26,578/– **ಆಕ್ಷೇಪಣೆ:** ಈ ಮೇಲ್ಕಂಡ ಕಾಮಗಾರಿಯಲ್ಲಿ, Supplying and Commissioning of Equipment ಗಾಗಿ ರೂ. 21.71 ಲಕ್ಷ ರೂ. ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಆದರೆ ಟೆಂಡರ್ ಕರೆಯುವ ಮುನ್ನಾ ಎಸ್.ಆರ್ ನಲ್ಲಿ ಇಲ್ಲದೇ ಇರುವ ಸಾಮಾಗ್ರಿಗಳಿಗೆ ಮಾರುಕಟ್ಟೆ ದರವನ್ನು ನಿಗದಿ ಪಡಿಸಿಕೊಂಡು ಅಂದಾಜು ಮಾಡಲಾಗಿದ್ದು, ದರಪಟ್ಟಿ ಮೂಲಕ ಸ್ಪರ್ಧಾತ್ಮಕ ದರವನ್ನು ನಿಗದಿಪಡಿಸಿರುವುದಿಲ್ಲ. ಒಂದು ವೇಳೆ ಸ್ಪರ್ಧಾತ್ಮಕ ದರದ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸದ್ದಾಗಿದ್ದಲ್ಲಿ ಸದರಿ ಕಾಮಗಾರಿಯ ವೆಚ್ಚದಲ್ಲಿ ಕಡಿಮೆಯಾಗಬಹುದಿತ್ತು. ಈ ಸಂಬಂಧ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ 39, ದಿನಾಂಕ: 21.11.2020 ರಲ್ಲಿ ವಿವರಣೆ ಕೋರಿದ್ದರೂ ಸಹ ಸೂಕ್ತ ಸಮಜಾಯಿಷಿ ನೀಡಿರುವುದಿಲ್ಲ. ಆದುದರಿಂದ ರೂ. 22,26,578/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಪಾವತಿ ವಿವರ ಈ ಕೆಳಕಂಡಂತಿದೆ. AB/AC ಸಂಖ್ಯೆ:–100034/000880 ಧನಾದೇಶ ಸಂಖ್ಯೆ:– 965056, ದಿನಾಂಕ: 31.03.2018 ರ ಮೊತ್ತ 22,26,578/–	Construction of Sewage Treatment Plant for Diploma College & Boys Hostel at Bramhavara ಕಾಮಗಾರಿಯ ಅಂದಾಜು ಮೊತ್ತವು ರೂ. 50.00 ಲಕ್ಷಗಳಾಗಿರುತ್ತದೆ. ಅದರಲ್ಲಿ 27.69 ಲಕ್ಷ ಮೊತ್ತವನ್ನು ಸಿವಿಲ್ ಕಾಮಗಾರಿಗಾಗಿ ಹಾಗೂ ರೂ.21.71 ಲಕ್ಷವನ್ನು Supplying and Commissioning of Equipment ಗಾಗಿ ಮತ್ತು ಇತರೆ ವೆಚ್ಚಗಳಿಗಾಗಿ 0.60 ಲಕ್ಷ ಅವಕಾಶ ಮಾಡಿಕೊಳ್ಳಲಾಗಿರುತ್ತದೆ, ಸಿವಿಲ್ ಕಾಮಗಾರಿ ಹಾಗು ಉಪಕರಣಗಳ ಸರಬರಾಜಿಗಾಗಿ ಟೆಂಡರ್ ಪ್ರಕಟಣೆ ಸಂಖ್ಯೆ TN 30 ದಿನಾಂಕ 17.07.2017ರಂದು ಪ್ರಕಟಣೆ ನೀಡಲಾಗಿದೆ. Supplying and Commissioning of Equipment ಐಟಂಗಳಿಗೆ ದರವನ್ನು, ಎಸ್.ಆರ್ ದರಪಟ್ಟಿಯಲ್ಲಿ ಅಳವಡಿಸದಿರುವ ಕಾರಣ, ಸದರಿ ಐಟಂಗಳಿಗೆ ಈ ಕಾಮಗಾರಿಯಲ್ಲಿ ಪರಿಣಿತಿ ಹೊಂದಿರುವ Brookefield Technologies Pvt Ltd., Bangalore. ಇವರಿಂದ ದರಗಳನ್ನು ಪಡೆಯಲಾಗಿರುತ್ತದೆ. ಸದರಿ ದರಗಳನ್ನು ಅಂದಾಜು ಪಟ್ಟಿ ತಯಾರಿಸುವ ಸಲುವಾಗಿ ಮತ್ತು ಹೋಲಿಕೆ ಮಾಡಲು ಮಾತ್ರ ಪಡೆಯಲಾಗಿರುತ್ತದೆ. ಅಂದಾಜು ಪಟ್ಟಿಯನ್ನು Brookefield Technologies Pvt Ltd., Bangalore. ರವರು ತಯಾರಿಸಿ ನೀಡಲಾದ ದರದ ಆಧಾರದ ಮೇಲೆ ತಯಾರಿಸಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆನ್‌ಲೈನ್‌ನಲ್ಲಿ ಪಾರದರ್ಶಕವಾಗಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕಟಣೆಯನ್ವಯ ಭಾಗವಹಿಸಿದ್ದ ಗುತ್ತಿಗೆದಾರರು ಕೋಟ್ ಮಾಡಲಾದ ಸ್ಪರ್ಧಾತ್ಮಕ ದರವನ್ನು ಪರಿಗಣಿಸಿ, ಕಾಮಗಾರಿಗೆ ಆದೇಶ ನೀಡಲಾಗಿರುತ್ತದೆ. ಅಂದಾಜು ಮೊತ್ತಕ್ಕಿಂತ ಶೇಕಡಾ 6 ರಷ್ಟು ಕಡಿಮೆ ದರವನ್ನು ಗುತ್ತಿಗೆದಾರ ಸಂಸ್ಥೆ ಮೆ. Life essentials, Udupi ರವರು ನಮೂದಿಸಿರುವುದರಿಂದ ರೂ.17,24,900/– ಕ್ಕೆ ಕಾರ್ಯಾದೇಶ ನೀಡಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದದ ಪ್ರಕಾರ ಸರಬರಾಜು ಮಾಡಿ ಅಳವಡಿಸಲಾಗಿದ್ದು, ಇದರೊಂದಿಗೆ ಅಗತ್ಯವಿದ್ದ ಹೆಚ್ಚುವರಿ 4 ಐಟಂಗಳ ಸರಬರಾಜು ಮತ್ತು ಅಳವಡಿಕೆಗಾಗಿ ರೂ.3,84,178/– ಮತ್ತು ಒಪ್ಪಂದದ ಐಟಂ ನಂ 8 ರಲ್ಲಿ ಫಿಲ್ಟರ್‌ಗಾಗಿ ಒಂದು ನಂಬರ್ ಜೊತೆ ಹೆಚ್ಚುವರಿಯಾಗಿ ಮತ್ತೊಂದು ನಂಬರ್ ಸೇರಿಸಿ (ಒಟ್ಟು 2) ಅಳವಡಿಸಿರುವುದರಿಂದ ರೂ. 1,17,500/– ಒಟ್ಟಾಗಿ ರೂ.5,01,678/– ಹೆಚ್ಚುವರಿ ವೆಚ್ಚವಾಗಿರುತ್ತದೆ. ಈ ಹೆಚ್ಚುವರಿ ವೆಚ್ಚಕ್ಕಾಗಿ ರೂ.5,33,700/– ತಗಲುತ್ತಿದ್ದು, ಶೇ.6 ರಷ್ಟು ಕಡಿಮೆ ಮೊತ್ತದಲ್ಲಿ ನಿರ್ವಹಿಸಿರುವುದರಿಂದ ವಿಶ್ವವಿದ್ಯಾಲಯಕ್ಕೆ ರೂ.32,022/– ರಷ್ಟು ಉಳಿತಾಯವಾಗಿರುತ್ತದೆ. ಈ ಹೆಚ್ಚುವರಿ ವೆಚ್ಚವನ್ನು ಅಂದಾಜಿನಲ್ಲಿ ಮೀಸಲಿರಿಸಲಾದ ರೂ.59,265/– ರಲ್ಲಿ ಭರಿಸಿದ್ದು ಯಾವುದೇ ಹೆಚ್ಚುವರಿ ವೆಚ್ಚವಾಗಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಿಸಿದಂತೆ EIRL ಅನುಮೋಧನೆ ಮತ್ತು Suppliment Agreement ನ್ನು ಪಡೆಯಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.

30. Upgradation of Ethernet work, OFC Connectivity ಕಾಮಗಾರಿಗೆ ಸಂಬಂಧಿಸಿದಂತೆ (ಅಂದಾಜು ಮೊತ್ತ ರೂ. 13,00,000/–) ರೂ. 12,74,555/– ಆಕ್ಷೇಪಣೆ Upgradation of Ethernet work ಕಾಮಗಾರಿಯಲ್ಲಿ OFC Connectivity ಗಾಗಿ ರೂ.13 ಲಕ್ಷಗಳನ್ನು ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಆದರೆ ಟೆಂಡರ್ ಕರೆಯುವ ಮುನ್ನಾ ಎಸ್. ಆರ್. ನಲ್ಲಿ ಇಲ್ಲದೇ ಇರುವ ಸಾಮಾಗ್ರಿಗಳಿಗೆ ಮಾರುಕಟ್ಟೆ ದರವನ್ನು ನಿಗದಿ ಪಡಿಸಿಕೊಂಡು ಅಂದಾಜು ಮಾಡಲಾಗಿದ್ದು, ದರಪಟ್ಟಿ ಮೂಲಕ ಸ್ಪರ್ದಾತ್ಮಕ ದರವನ್ನು ನಿಗದಿಪಡಿಸಿರುವುದಿಲ್ಲ. ಈ ಸಂಬಂಧ ಆಡಿಟ್ ವಿಚಾರಣ ಪತ್ರ ಸಂಖ್ಯೆ 39, ದಿನಾಂಕ: 21.11.2020 ರಲ್ಲಿ ವಿವರಣೆ ಕೋರಿದ್ದರೂ ಸೂಕ್ತ ಸಮಜಾಯಿಷಿ ನೀಡಿರುವುದಿಲ್ಲ. ಆದ್ದುದರಿಂದ ಕಾಮಗಾರಿಗಾಗಿ ವೆಚ್ಚಮಾಡಿರುವ ಮೊತ್ತ ರೂ.12,74,555/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಎಸ್.ಆರ್ ದರಪಟ್ಟಿಯಲ್ಲಿರದ ಐಟಂಗಳಿಗೆ ಈ ಕಾಮಗಾರಿಯಲ್ಲಿ ಪರಿಣಿತಿ ಹೊಂದಿರುವ SAV Technology, Shivamogga ಇವರಿಂದ ದರಗಳನ್ನು ಪಡೆಯಲಾಗಿರುತ್ತದೆ. ಸದರಿ ದರಗಳನ್ನು ಅಂದಾಜು ಪಟ್ಟಿ ತಯಾರಿಸುವ ಸಲುವಾಗಿ ಮಾತ್ರ ಉಪಯೋಗಿಸಲಾಗಿರುತ್ತದೆ. ತದನಂತರ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆನ್‌ಲೈನ್‌ನಲ್ಲಿ ಪಾರದರ್ಶಕವಾಗಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು ಈ ಕಾಮಗಾರಿಯನ್ನು ನಿರ್ವಹಿಸಲು ತಗಲುವ ಕನಿಷ್ಟ ಮೊತ್ತಕ್ಕೆ ಸ್ಪರ್ಧಾತ್ಮಕ ದರಗಳನ್ನು ನಮೂದಿಸಿರುತ್ತಾರೆ. ಅದರಲ್ಲಿ ಕಡಿಮೆ ಮೊತ್ತವನ್ನು ನಮೂದಿಸಿದ್ದ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಲಾಗಿರುತ್ತದೆ. ಆದ್ದರಿಂದ ಅಂದಾಜು ಪಟ್ಟಿ ತಯಾರಿಸುವ ಸಂದರ್ಭದಲ್ಲಿ ಸ್ಪರ್ಧಾತ್ಮಕ ದರವನ್ನು ನಿಗಧಿಪಡಿಸಿರದಿದ್ದರೂ ಸಹ, ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು ಸ್ಪರ್ಧಾತ್ಮಕ ದರವನ್ನು ನಮೂದಿಸಿರುವುದರಿಂದ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.
31. **2017–18 ನೇ ಸಾಲಿನ ಕಾಮಗಾರಿ ಬಿಲ್ಲುಗಳಲ್ಲಿ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಿ ಪಾವತಿಸಿರುವ ಮೊಬಲಗು 1,64,69,802/– ಗಳ ಆಕ್ಷೇಪಣೆ** **ಪ್ರಸ್ತುತ ಸಾಲಿನಲ್ಲಿ ನಿರ್ವಹಿಸಿದ ಕಾಮಗಾರಿ ಬಿಲ್ಲುಗಳಲ್ಲಿನ ಪ್ರಮುಖ ನ್ಯೂನತೆಗಳು ಕೆಳಕಂಡಂತಿವೆ.** A. ಟೆಂಡರ್‌ನಲ್ಲಿ ನಮೂದಿಸಿದ ದರಗಳ ಬಗ್ಗೆ ಶೇ. 125% ಮೀರುವ ಸಂದರ್ಭವಿದ್ದರೂ ಸಹ ದರ ಸಂಧಾನ ಪ್ರಕ್ರಿಯೆಯ ವಿವರವಿಲ್ಲ ಹಾಗೂ Revised Estmate/W.slip/ELRL ಗಳಾದಾಗ ಹೆಚ್ಚುವರಿ ವೆಚ್ಚವಾಗುವುದಕ್ಕೆ Supp.Est. ಆಗಿರುವ ವಿವರಗಳಿರುವುದಿಲ್ಲ ಹಾಗೂ ಟೆಂಡರ್ ಪ್ರೀಮಿಯಂ ದರದ ಬಗ್ಗೆ ವಿಶ್ಲೇಷಣೆ ಇರುವುದಿಲ್ಲ ಮುಂದುವರಿದು, ಹಲವಾರು ಕಾಮಗಾರಿಗಳು ವಿಳಂಬವಾಗಿರುವುದು ಕಂಡುಬಂದಿದ್ದು, ಇವುಗಳ ಪ್ರಾರಂಭಿಕವಾದ 1ನೇ ಹಾಗೂ 2ನೇ ಬಿಲ್ಲುಗಳಲ್ಲಿ ಗುತ್ತಿಗೆದಾರರು ನಿರ್ವಹಿಸಿರುವ ಐಟಂಗಳನ್ನು ಗಮನಿಸಿದಾಗ ಅವುಗಳು ಗುತ್ತಿಗೆದಾರರಿಗೆ ಪ್ರಾರಂಭಿಕವಾಗಿ ಲಾಭದಾಯಕವಾಗುವ ಐಟಂಗಳೆಂದು ಕಂಡುಬಂದಿದ್ದು, ಇದನ್ನು CAG Class Front end loaded ಎಂದು ಏಕೆ ಪರಿಗಣಿಸಬಾರದು? B. ವಿಳಂಬದ ಅವಧಿಗೆ ವಿಧಿಸಿರುವ ದಂಡದ ಶುಲ್ಕವನ್ನು ಯಾವ ನಿಖರತೆಯ ಮಾನದಂಡದ ಆಧಾರದ ಮೇಲೆ ನಿರ್ಧರಿಸಿದೆ ಎಂಬುದನ್ನು ವಿಶ್ಲೇಷಿಸುವುದು. C. ಕಾಮಗಾರಿಗಳ ಕಡತಗಳನ್ನು ಗಮನಿಸಿದಲ್ಲಿ ಯಾವುದೇ ಕಡತಗಳಲ್ಲಿ	A. Standard tender documents KW-1,2,3 & 4 ರನ್ವಯ ಪ್ರಸ್ತುತ ಕಾಮಗಾರಿಗಳ ಟೆಂಡರನ್ನು ಆಹ್ವಾನಿಸುತ್ತಿದ್ದು, ಅದರನ್ವಯ ಟೆಂಡರ್‌ನಲ್ಲಿ ನಮೂದಿಸಿದ ದರಗಳು ಶೇ. 125% ಮೀರಿದ್ದರೂ ಸಹ ಅದನ್ನು rationalization ಮಾಡುವ ಅವಕಾಶ ಕಲ್ಪಿಸಲಾಗಿರುವುದಿಲ್ಲ. W.slip/EIRL ಗಳನ್ನೊಳಗೊಂಡಂತೆ ಒಟ್ಟಾರೇ ವೆಚ್ಚವು ಅನುಮೋದಿತ ಅಂದಾಜು ಮೊತ್ತ ಮೀರದಂತೆ, ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ಸಂಬಂಧಿಸಿದ ಅಧಿಕಾರಿಗಳಿಂದ ಅನುಮೋದನೆ ಪಡೆಯಾಲಾಗಿರುತ್ತದೆ. ಬಹುತೇಕ ಹೆಚ್ಚಿನ ಎಲ್ಲಾ ಕಾಮಗಾರಿಗಳ ಟೆಂಡರ್ ಪ್ರೀಮಿಯಂ ಕಡಿಮೆ ಇದ್ದು, ಟೆಂಡರ್ ಪ್ರೀಮಿಯಂ ಅನ್ನು ಹೆಚ್ಚುವರಿಯಾಗಿ ನಮೂದಿಸಿರುವ ಕಾಮಗಾರಿಗಳ ಟೆಂಡರ್‌ಗಳಲ್ಲಿ ದರ ಸಂದಾನ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ವಿವರಗಳನ್ನು ಆಸ್ತಿ ಅಧಿಕಾರಿಗಳ ಕಛೇರಿಯಲ್ಲಿ ಅಯಾ ಕಾಮಗಾರಿಗಳ ಟೆಂಡರ್ ಕಡತದಲ್ಲಿ ಲಗತ್ತಿಸಲಾಗಿರುತ್ತದೆ. ಯಾವುದೇ ಕಾಮಗಾರಿಯನ್ನು ಪ್ರಾರಂಭಿಸಿದಾಗ, ಮೊದಲು ಕೈಗೆತ್ತಿಕೊಳ್ಳಬೇಕಾದಂತಹ ಐಟಂಗಳನ್ನು ನಿರ್ವಹಿಸಿದ ನಂತರವೇ ಬೇರೆ ಐಟಂಗಳನ್ನು ನಿರ್ವಹಿಸಬಹುದಾಗಿರುತ್ತದೆ. ಉದಾ: ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಮಣ್ಣಿನಲ್ಲಿ ಅಗೆತ, ಫೂಟಿಂಗ್ ಕಾಂಕ್ರಿಟ್, ಕಾಲಂ, ಪ್ಲಿಂತ್, ಲಿಂಟಲ್, ಛಾವಾಣಿ ಇತ್ಯಾದಿ ಇದೇ ರೀತಿಯಲ್ಲಿಯೇ ಐಟಂಗಳನ್ನು ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ, ಪ್ರಾರಂಭಿಕವಾಗಿ ನಿರ್ವಹಿಸುವ ಅಂಶಗಳನ್ನು ಲಾಭದಾಯಕ ಐಟಂಗಳೆಂದು ಪರಿಗಣಿಸಲು ಸಾಧ್ಯವಿರುವುದಿಲ್ಲ. ಅಲ್ಲದೇ ಯಾವುದೇ ಕಾಮಗಾರಿಗಳನ್ನು ಗುತ್ತಿಗೆದಾರರು ಅರ್ಧದಲ್ಲಿ ನಿಲ್ಲಿಸಿರುವುದಿಲ್ಲ. ಗುತ್ತಿಗೆದಾರರಿಗೆ ಯಾವುದೇ ಭಾಗಶ: ಬಿಲ್ಲಿನಲ್ಲಿ ಯಾವುದೇ ಮೊತ್ತವನ್ನು ಪಾವತಿಸಿದ್ದರೂ ಸಹ ಒಟ್ಟಾರೆ ಎಲ್ಲಾ ರೀತಿಯಿಂದಲೂ ಕಾಮಗಾರಿ

ಹೆಚ್ಚುವರಿಯಾಗುವ ಪರಿಮಾಣಕ್ಕೆ ಪೂರಕವಾದ ವ್ಯತ್ಯಾಸಕ್ಕೆ Work silp/EIRL ತಯಾರಿಸದೇ Modified estimate ನನ್ನು ಯಾವ ತಾಂತ್ರಿಕತೆಯ ಆಧಾರದ ಮೇಲೆ ನಿರ್ವಹಿಸಿದೆ ಹಾಗೂ Mod. Estimate ನನ್ನು ಗಮನಿಸಿದಲ್ಲಿ ಇದು ಕಾಮಗಾರಿಯ Actual Qty ಗಳಾಗಿದ್ದು ಮತ್ತು ಅಳತೆ ಪುಸ್ತಕದ ನಕಲು ಎಂದೂ ಸಹ ಪರಿಗಣಿಸಬಹುದಾಗಿದೆ.

D. ಕಾಮಗಾರಿ ಬಿಲ್ಲುಗಳಿಗೆ ಪರಿಮಾಣಗಳ ಗುಣಮಟ್ಟದ ನಿಖರತೆಗಾಗಿ ಯಾವುದೇ ಬಿಲ್ಲುಗಳಲ್ಲಿ ಗುಣನಿಯಂತ್ರಣ ಪ್ರಮಾಣ ಪತ್ರಗಳಿರುವುದಿಲ್ಲ ಹಾಗೂ ನಿಗದಿ ಪಡಿಸಿದ ಗುಣ ನಿಯಂತ್ರಣ ಸಂಸ್ಥೆಯ ವಿವರಗಳಿರುವುದಿಲ್ಲ.

E. ಕಾಮಗಾರಿಗಳ ಪ್ರಾರಂಭದ ಮುನ್ನ ಇರುವ ವಾಸ್ತವ ಸ್ಥಿತಿಯ ಛಾಯಾಚಿತ್ರದ ಪುರಾವೆಗಳಿಲ್ಲ ಹಾಗೂ ಬಿಲ್ಲು ಪಾವತಿಯ ಮುನ್ನ 3ನೇ ಸಮಾಲೋಚನಾ ಸಂಸ್ಥೆಯ ಪರಿಶೀಲನಾ ವರದಿ ಇರುವುದಿಲ್ಲ.

F. ಬೋರ್‌ವೆಲ್ ಕೊರೆಸುವಿಕೆಯ ಕಾಮಗಾರಿ ಬಿಲ್ಲುಗಳಲ್ಲಿ ಅಳವಡಿಸಿರುವ ಕೇಸಿಂಗ್ ಪೈಪ್‌ನ ನಿಖರವಾದ ಪ್ರಮಾಣ ಇರುವುದಿಲ್ಲ ಅಥವಾ ಕೇಸಿಂಗ್‌ನ ಪ್ರಮಾಣಕ್ಕೆ ಪೂರಕವಾಗಿ Magnetic test ಮಾಡಿಸಿರುವ ವಿವರ ಹಾಗೂ ನೀರಿನ ಲಭ್ಯತೆಯ ಬಗ್ಗೆ ಸಂಬಂಧಪಟ್ಟ ಜಿಯಾಲಾಜಿಕಲ್ ಸಂಸ್ಥೆಯವರ ವಿವರವಿಲ್ಲ ಮತ್ತು ಸಂಗ್ರಹವಾದ ನೀರು ಕುಡಿಯಲು ಯೋಗ್ಯವೇ ಅಥವಾ ಬೆಳೆಗಳ ಉಪಯೋಗಕ್ಕೆ ಮಾತ್ರ ಸೀಮಿತವಾಗಿರುವುದೇ ಎಂಬ ಬಗ್ಗೆ ಪರೀಕ್ಷಾ ವರದಿ ಲಗತ್ತಿಸಿಲ್ಲ.

G. ಕೆ.ಟಿ.ಪಿ.ಪಿ ಕಾಯಿದೆ 2000ದ ಪ್ರಕಾರ ರೂ2,00,00,000 ಮೂಲ್ಯದ ಒಳಗಿನ ಕಾಮಗಾರಿ/ಖರೀದಿಗಳ ಟೆಂಡರ್ ಆಹ್ವಾನಿಸುವಾಗ ಅರ್ಜಿ ಸಲ್ಲಿಸಲು ಒಂದು ತಿಂಗಳ ಕಾಲವಕಾಶ ನೀಡಬೇಕಾಗಿರುತ್ತದೆ. ಆದರೆ ಕೆಲವೊಂದು ಕಾಮಗಾರಿಗಳಲ್ಲಿ ಈ ನಿಯಮದ ಪಾಲನೆ ಆಗಿರುವುದಿಲ್ಲ

ಅದಕ್ಕಾನುಗುಣವಾಗಿ ಮೇಲ್ಕಂಡ ಅಂಶಗಳನ್ನು ಉದಾಹರಿಸುವ ಸಲುವಾಗಿ, ಈ ಕೆಳಕಂಡ ಕಾಮಗಾರಿ ಬಿಲ್ಲುಗಳನ್ನು ಗಮನಿಸಲು ತಿಳಿಸಲಾಗಿದೆ.

ಪೂರ್ಣಗೊಂಡ ನಂತರವೇ ಅಂತಿಮ ಬಿಲ್ಲನ್ನು ನೀಡಲಾಗಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ಲೋಪವಾಗಿರುವುದಿಲ್ಲ. ಗುತ್ತಿಗೆದಾರರಿಂದ ಕಾಮಗಾರಿಯಲ್ಲಿ ವಿಳಂಭವಾದಲ್ಲಿ ಟೆಂಡರ್ ಕರಾರು ರೀತ್ಯಾ ಗುತ್ತಿಗೆದಾರರಿಗೆ ದಂಡವಿಧಿಸಲಾಗುವುದು.

B. ಟೆಂಡರ್ ಕರಾರು ರೀತ್ಯಾ ಪ್ರತಿ ದಿನವೊಂದಕ್ಕೆ ಉಳಿಕೆ ಕಾಮಗಾರಿ ಮೊತ್ತದ 0.1% ರಂತೆ ಗರಿಷ್ಠ 10% ರಂತೆ ದಂಡವನ್ನು ವಿಧಿಸಲಾಗುತ್ತದೆ.

C. W.slip/EIRL ಗಳನ್ನೊಳಗೊಂಡಂತೆ ತಯಾರಿಸಿರುವ ಅಂದಾಜು ಪಟ್ಟಿಗೆ Modified estimate ಎಂಬ ಪದವನ್ನು ತಪ್ಪಾಗಿ ಬಳಸಲಾಗಿರುತ್ತದೆ. W.slip/EIRL ಗಳನ್ನೊಳಗೊಂಡಂತೆ ಒಟ್ಟಾರೇ ವೆಚ್ಚವು ಅನುಮೋದಿತ ಅಂದಾಜು ಮೊತ್ತ ಮೀರದಂತೆ, ಕಾಮಗಾರಿಗಳನ್ನು ನಿರ್ವಹಿಸಿರುವುದರಿಂದ ಇದರಲ್ಲಿ ಯಾವುದೇ ಲೋಪವಾಗಿರುವುದಿಲ್ಲ.

D. ಪ್ರಸ್ತುತ ಕಾಮಗಾರಿಗಳ ಬಿಲ್ಲುಗಳಲ್ಲಿಯೇ ಗುಣನಿಯಂತ್ರಣ ಪರೀಕ್ಷಾ ವರದಿಗಳನ್ನು ಲಗತ್ತಿಸಿಡಲಾಗಿದೆ.

E. ಪ್ರಸ್ತುತ ಕಾಮಗಾರಿಗಳ ಬಿಲ್ಲುಗಳ ಜೊತೆಗೆ ಛಾಯಾ ಚಿತ್ರಗಳನ್ನು ಲಗತ್ತಿಸಲು ಕ್ರಮ ಕೈಗೊಳ್ಳಲಾಗಿದೆ.

F. ಬೋರ್‌ವೆಲ್ ಕೊರೆಸುವಾಗ ಬೋರ್‌ವೆಲ್‌ನಿಂದ ನೀರನ್ನು ಪಂಪು ಮಾಡಿ V-Notch ಮುಖಾಂತರ ಪರಿಶೀಲಿಸಿದ ನಂತರವೇ ಬಿಲ್ಲಿನ ಮೊತ್ತವನ್ನು ಪಾವತಿಸಲಾಗಿರುತ್ತದೆ. ಎಲ್ಲಾ ಬೋರ್‌ವೆಲ್‌ಗಳು ಫಲಪ್ರದವಾಗಿ ಈಗಲೂ ಕಾರ್ಯನಿರ್ವಹಿಸುತ್ತಿವೆ. ಆದಕಾರಣ ಆಕ್ಷೇಪಣೆ ಕೈಬಿಡಲು ಕೋರಿದೆ.

